ದೆಯೋ ಅಷ್ಟನ್ನು ಹೊರೆಗಚೆಯಿಂದ, ಎಂದರೆ ಎಲ್ಲಿ ಈ ಪಾನನಿರೋಧ ಜಾರಿಯಲ್ಲಿರುತ್ತೋ ಅಂಥ ತಾಲ್ಲೂಕು ಪ್ರದೇಶದಿಂದ ತರುವಂತೆ ಏರ್ಪಾಡು ಮಾಡಿದ್ದೇವೆ.

ಈಗ ಸೂಚಿಸಿರತಕ್ಕ ಏಳು ತಾಲ್ಲೂಕುಗಳಲ್ಲಿಯೂ ಪಾನನಿರೋಧ ಜಾರಿಯಲ್ಲಿದೆ. ಹಾಗೆ ಅಲ್ಲಿ ಶೇಂದಿಯನ್ನು ಇಳಿಸುವುದಕ್ಕೆ ಅವಕಾಶಕೊಟ್ಟರೆ ಪುದರಿಂದ ಏನಾದರೂ ಇದರಿಂದ ಜನರಿಗೆ ಪುನಃ ಆಸೆ ಹುಟ್ಟಬಹುದೆಂಬ ಒಂದು ಅನುಮಾನವನ್ನು ತಾವುಗಳಾರೂ ಭಾವಿಸಬೇಕಾಗಿಲ್ಲ. ಕಾರಣವೇನೆಂದರೆ ಆ ಪ್ರಾಂತದಲ್ಲಿ ಈಗಾಗಲೇ ಪಾನನಿರೋಧ ಬರಲಿರುವುದರಿಂದ ಅಲ್ಲಿ ಇಳಿಸಿದ ಶೇಂದಿಯನ್ನು ಅಲ್ಲಿಂದ ಹೊರಗಡೆಗೆ ಸುರಕ್ಷಿತವಾಗಿ, ಅದು ಅಲ್ಲಿ ಯಾವ ರೀತಿಯಲ್ಲೂ ಉಪಯೋಗಕ್ಕೆ ಅವಕಾಶಕೊಡದಂತೆ, ಸಾಗಿಸಲು ಪೋಲೀಸ್ ಮತ್ತೂ ಆಬ್ಕಾರಿ ಶಿಬ್ಬಂದಿಯನ್ನು ಕಾವಲಿಡಲಾಗಿದೆ. ಅಂಥ ಅಕ್ರಮ ನಡೆವಳಿಕೆಗಳೇನಾದರೂ ನಡೆದ ಪಕ್ಷದಲ್ಲಿ ಕೂಡಲೇ ಅಂಥವರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ. ಸರ್ಕಾರ ಇಷ್ಟೆಲ್ಲಾ ಏರ್ಪಾಡುಗಳನ್ನು ಮಾಡಿರುತ್ತದೆ. ಹೀಗೆ ಇಳಿಸಲಾದ ಶೇಂದಿಯನ್ನು ಕೂಡಲೇ ಲಾರಿಗಳ ಮೂಲಕ ಹೊರಕ್ಕೆ ಸಾಗಿಸಲು ಲಾರಿಗಳಿಗೆ ಬೇಕಾದ ಪರ್ಮಿಟ್‌ಗಳನ್ನು ಕೊಡಲಾಗಿದೆ; ಮತ್ತು ಹಾಗೆ ಪರ್ಮಿಟ್ ಕೊಡಲು ಸರ್ಕಾರ ಆಜ್ಞೆಯನ್ನು ಮಾಡಿರುತ್ತದೆ. ಈ ಕಾರಣಗಳಿಂದ ಆ ಏಳು ತಾಲ್ಲೂಕುಗಳ ಪ್ರದೇಶದಲ್ಲಿರತಕ್ಕ ಜನರಿಗೆ ಯಾವ ತೊಂದರೆಯೂ ಉಂಟಾಗುವುದಿಲ್ಲ. ಆದುದರಿಂದ ಈ ನಿರ್ಣಯವನ್ನು ತಂದಿರತಕ್ಕ ನನ್ನ ಮಾನ್ಯ ಮಿತ್ರರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಏ. ಮಸಿಯಪ್ಪನವರು.—ಮಾನ್ಯ ಸಚಿವರು ಈ ನಿರ್ಣಯದ ವಿಷಯವಾಗಿ ಸಮರ್ಪಕವಾದ ಒಂದು ಭರವಸೆಯನ್ನು ಕೊಟ್ಟಿರುವುದರಿಂದ ಆ ಆಧಾರದ ಮೇಲೆ ನಾನು ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

The resolution was, by leave, withdrawn.

Sri B. HUTCHE GOWDA.—It may be put to vote.

Mr. SPEAKER.—The House has granted permission to withdraw the resolution.

Sri B. HUTCHE GOWDA.—I demand a poll.

Mr. SPEAKER.—Not necessary. Leave is granted and the mover has withdrawn his resolution.

Request to dispose of as many resolutions as possible.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಮಾನ್ಯ ಅಧ್ಯಕ್ಷರೆ, ನಿರ್ಣಯಗಳ ವಿಚಾರವಾಗಿ ಒಂದು ಮಾತು ಹೇಳಬೇಕೆಂದಿದ್ದೇನೆ. ಈಗ 81 ನಿರ್ಣಯಗಳು ಬಂದಿವೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಆದಷ್ಟು ನಿರ್ಣಯಗಳನ್ನು ಸಭೆಯ ಮುಂದೆ ಚರ್ಚಿಸುವುದು ನ್ಯಾಯವಾಗಿ ಕಾಣುತ್ತದೆ. ಅದಕ್ಕೆ ಕಾಂಗ್ರೆಸ್ ಪಕ್ಷದ ಪರವಾಗಿ ಇಬ್ಬರು ಅಥವಾ ಮೂರು ಮಂದಿ, ನಮ್ಮ ಕಡೆಯಿಂದ ಇಬ್ಬರು ಅಥವಾ ಮೂರು ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ವಿರೋಧಾಭಿಪ್ರಾಯವನ್ನು ಸಭೆಯ ಮುಂದೆ ತಿಳಿಸುವುದಕ್ಕೆ ಅವಕಾಶವಾಗುತ್ತದೆ ಮತ್ತು ಹೆಚ್ಚು ನಿರ್ಣಯಗಳೂ ತೆಗೆದುಕೊಳ್ಳಲ್ಪಡುತ್ತವೆ. ಆದ್ದರಿಂದ ಆ ರೀತಿ ಒಂದು ನೀತಿಯನ್ನನುಸರಿಸಬೇಕೆಂಬುದು ನನ್ನ ಅಭಿಪ್ರಾಯ.

Mr. SPEAKER.—If the Hon'ble Members come to some understanding, that may be considered.

Sri Mulka GOVINDA REDDY.—That is left to the Chair.

Mr. SPEAKER.—We will see to it. Tomorrow also we have Resolutions.

No. 2. Abolition of Middle School Examinations.

ಶ್ರೀ ಎಸ್. ಕರಿಯಪ್ಪನವರು (ವಿರೂಪಾಕ್ಷಪುರ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ.—

> "ಮಿಡ್ಲ್ ಸ್ಕೂಲು ಪರೀಕ್ಷೆಯನ್ನು ರದ್ದುಮಾಡ ಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಒಂದು ದೇಶದ ಆಗು ಹೋಗುಗಳು ಹೇಗಾಗಬಹುದೆಂಬುದನ್ನು ಕಂಡುಹಿಡಿಯಬೇಕಾದರೆ ಆ ದೇಶದ ವಿದ್ಯಾಭ್ಯಾಸ ಕ್ರಮ ಹೇಗಿದೆ ಎನ್ನುವುದನ್ನು ನೋಡಬೇಕು. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಾವು ಕೊಟ್ಟಿರುವ ತರಬೇತು ಸರಿಯಾಗಿಲ್ಲದೇ ಇರುವ ಭಾಗದಲ್ಲಿ ದೇಶದ ಮುಂದಿನ ಪ್ರಜೆಗಳು ಸರಿಯಾಗಿ ತರಬೇತು ಹೊಂದದೆ ದೇಶಕ್ಕೆ ಒಂದಲ್ಲ ಒಂದು ವಿಧದಲ್ಲಿ ಅನಾನುಕೂಲ, ತೊಂದರೆ ಉಂಟಾಗುವುದು ಸ್ವಾಭಾವಿಕ. ಆದಕಾರಣ ಸರಿಯಾದ ಪ್ರಜೆಗಳನ್ನು ತಯಾರು ಮಾಡುವುದಕ್ಕೆ ನಿಜವಾಗಿಯೂ ಒಂದು ಸೂಕ್ತವಾದ ವಿದ್ಯಾಭ್ಯಾಸ ಕ್ರಮ ಇರುವುದು ತುಂಬಾ ಅವಶ್ಯಕ. ಈಗ ನಮ್ಮ ದೇಶದಲ್ಲಿರತಕ್ಕಂಥ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತಂದು ಅನೇಕ ವರ್ಷಗಳಾಗಿವೆ. ಈಗಿರುವ ಪದ್ಧತಿಯನ್ನೇ ಬದಲಾವಣೆ ಮಾಡದೆ, ಈಗಿನ ಪರಿಸ್ಥಿತಿಗೆ ತಕ್ಕಂತೆ ಮಾರ್ಪಡಿಸದೆ ಅದನ್ನೇ ಅನುಸರಿಸುತ್ತೇವೆಂದು ಹೇಳಿದರೆ ಆರು ತಿಂಗಳಾಗಿರುವ ಮಗುವಿಗೆ ಹೊಲಿಸಿದ ಅಂಗಿಯನ್ನು ಆರು ವರ್ಷಗಳ ಮಗುವಿಗೆ ತೊಡಿಸುವುದಕ್ಕೆ ಪ್ರಯತ್ನಪಟ್ಟ ಹಾಗಾಗುತ್ತದೆ. ಆದಕಾರಣ ಈಗ ಬದಲಾಯಿಸಿರುವ ಪರಿಸ್ಥಿತಿಗೆ ತಕ್ಕ ಹಾಗೆ ವಿದ್ಯಾಭ್ಯಾಸ ಕ್ರಮವನ್ನು ಸಹ ನಾವು ಬದಲಾವಣೆ ಮಾಡಬೇಕಾದದ್ದು ತುಂಬಾ ಅವಶ್ಯಕವಾದುದು ಎನ್ನುವುದನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ನೈಪುಣ್ಯವನ್ನು ಹೊಂದಿರುವವರೇ ಹೇಳಿದ್ದಾರೆ. ಈಗ ನಾನಾದರೂ ಈ ನಿರ್ಣಯದಲ್ಲಿ ತಂದಿರತಕ್ಕಂಥ

(ಶ್ರೀ ಎಸ್. ಕರಿಯಪ್ಪನವರು).

ವಿಚಾರ ವಿದ್ಯಾಭ್ಯಾಸ ಕ್ರಮದಲ್ಲಿ ಆಗಬೇಕಾದ ಸುಧಾರಣೆಗಳ ಪೈಕಿ ಒಂದು ಮಾತ್ರ ಆಗಿದೆ. ಅದು ಮಾಧ್ಯಮಿಕ ಶಾಲೆಯ ಪರೀಕ್ಷೆಯನ್ನು ರದ್ದು ಮಾಡಬೇಕೆಂಬುದು. ಮಾಧ್ಯಮಿಕ ಶಾಲೆಯ ಪರೀಕ್ಷೆಯನ್ನು ಬಹಳ ಕಾಲದ ಹಿಂದೆ ವಿದ್ಯಾಭ್ಯಾಸ ಕ್ರಮದಲ್ಲಿ ಅಳವಡಿಸಿದರು. ಆಗ ಈ ಪರೀಕ್ಷೆಗೆ ಕುಳಿತುಕೊಳ್ಳುವ ಮಕ್ಕಳ ಸಂಖ್ಯೆ ಕೇವಲ ಕಡಿಮೆಯಾಗಿತ್ತು. ಅಲ್ಲದೆ ಆಗ ಹೆಚ್ಚಾಗಿ ಓದುವವರು ಕಡಮೆಯಾಗಿದ್ದರಿಂದ ಆ ಪರೀಕ್ಷೆ ಇಡಬಹುದಾಗಿತ್ತು. ಅಲ್ಲದೆ ಆಗ ದೇಶದಲ್ಲಿ ಕಾಲೇಜುಗಳೂ, ಹೈಸ್ಕೂಲುಗಳೂ ಕಡಮೆಯಾಗಿದ್ದುವು. ಅಂಥ ಸಂದರ್ಭದಲ್ಲಿ ಒಂದು ಪರೀಕ್ಷೆ ದೇಶದಲ್ಲಿ ಮಕ್ಕಳಿಗೆ ಅವಶ್ಯಕವಾಗಿತ್ತು. ಓದಲು ಮಕ್ಕಳು ಮುಂದೆ ಬರಬಹುದು ಎಂಬ ದೃಷ್ಟಿಯಿಂದ ಆಗ ಅವನ್ನು ಏರ್ಪಡಿಸಿದರು ಆಗ ದೇಶದಲ್ಲಿ ಕಾಲೇಜುಗಳು ಅಷ್ಟಿರಲಿಲ್ಲ; ಈಗ 33 ಕಾಲೇಜುಗಳಿವೆ, 220 ಹೈಸ್ಕೂಲುಗಳಿವೆ. ಹೀಗೆ ಹೆಚ್ಚಾಗಿ ಮೇಲ್ದರ್ಜೆ ವಿದ್ಯಾಭ್ಯಾಸ ಪಡೆಯುವುದಕ್ಕೆ ಬೇಕಾದಷ್ಟು ಸೌಕರ್ಯಗಳು ಈಗ ಒದಗಿವೆ. ಅಲ್ಲದೆ ಶಾಲೆಗೆ ಬರುವ ಮಕ್ಕಳ ವಯಸ್ಸನ್ನು ತೀರಾ ಕಡಮೆಯಾಗಿದೆ. ಮೊದಲು ನಮಗೆ ಗೊತ್ತಿರುವ ಹಾಗೆ ಹನ್ನಾರು ವರ್ಷಗಳ ಹಿಂದೆ ಮಿಡ್ಲ್ ಸ್ಕೂಲ್ ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ಸುಮಾರು 16–17 ವರ್ಷ ವಯಸ್ಸಾದವರು ಬರುತ್ತಿದ್ದರು, ಈ ದಿವಸ ಕುಳಿತುಕೊಳ್ಳುವ ಮಕ್ಕಳ ವಯಸ್ಸು ಕೇವಲ 9-10 ವರ್ಷಗಳು, ಈಗ ಇಂಥ ಸ್ಥಿತಿಯಿದೆ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಹೆಚ್ಚಾಗಿ ಶ್ರಮವಾಗುವಂಥ ಕೆಲಸವನ್ನು ಮತ್ತು ಅವರ ಮನಸ್ಸಿಗೆ ಹೆಚ್ಚು ಕೆಲಸವನ್ನು ಕೊಡುವ ಯಾವ ಕಾರ್ಯಗಳನ್ನೂ ಕೂಡ ಕೊಡಬಾರದೆಂದು ನಿಪುಣರು ಹೇಳುತ್ತಾರೆ ಮತ್ತು ನಮ್ಮ ಅನುಭವದಲ್ಲೂ ಅದು ನ್ಯಾಯವಾಗಿ ಕಂಡುಬಂದಿದೆ. ಈಗ ಈ ಪರೀಕ್ಷೆ ಇರುವುದರಿಂದ ಏನಾಗುತ್ತಿದೆಯೆಂದರೆ ಮಕ್ಕಳ ಮನಸ್ಸಿಗೆ ಕೇವಲ ಪರೀಕ್ಷೆ ಇದೆಯೆಂದು ಗಾಬರಿ ಉಂಟಾಗುವುದಕ್ಕೂ, ಅದರ ಬಗ್ಗೆ ರಾತ್ರಿ ಹಗಲು ಯೋಚನೆ ಮಾಡಿ ತೀರ್ಗಡೆಯಾಗಬೇಕೆಂದು ಅತಿಯಾಗಿ ಶ್ರಮಪಡುವುದಕ್ಕೂ ಈ ಮೂಲಕ ಮಕ್ಕಳ ಮನಸ್ಸಿಗೆ ಒಂದು ಭಯ ಮತ್ತು ಶ್ರಮ ಉಂಟಾಗುವುದಕ್ಕೂ ಕಾರಣವಾಗಿದೆ.

ಈಗ ನಾವು ನೋಡುವ ಹಾಗೆ ಸ್ಕೂಲು ಮತ್ತು ಕಾಲೇಜುಗಳಲ್ಲಿ ಸ್ಯಾಚ್ಯುರೇಷನ್ ಬಹಳ ಬಿದ್ದುಹೋಗಿದೆ. ಅದಕ್ಕೆ ಅನೇಕ ಕಾರಣಗಳನ್ನು ಹೇಳಿದ್ದಾರೆ. ಈಗ ಕೇವಲ ಚಿಕ್ಕ ವಯಸ್ಸಿನಲ್ಲಿ ಎಳೆಯ ಮನಸ್ಸಿಗೆ ಹೆಚ್ಚು ಶ್ರಮವುಂಟಾಗುವುದರಿಂದ ಮುಂದೆ ಬಹಳ ದುಷ್ಪರಿಣಾಮವಾಗುತ್ತದೆಂದು ಹೇಳದೆ ವಿಧಿಯಿಲ್ಲ. ಮಕ್ಕಳ ಮಾನಸಿಕ ಶಕ್ತಿ ಕುಂದುವುದು, ಆ ಮೂಲಕ ದೈಹಿಕ ಶಕ್ತಿಯೂ ಕುಂದುವುದಕ್ಕೆ ಅವಕಾಶವಾಗುವುದು, ಇದಕ್ಕೆ ಕೇವಲ ಚಿಕ್ಕ ವಯಸ್ಸಿನಲ್ಲಿ ಪರೀಕ್ಷೆಗೆ ಕಳುಹಿಸುವುದೇ ಕಾರಣವಾಗಿದೆ. ಇಷ್ಟೇ ಅಲ್ಲದೆ ಇನ್ನೂ ಹಲವಾರು ಕಾರಣಗಳಿಂದ ಈ ಪರೀಕ್ಷೆ ಹೋಗಬೇಕಾದುದು ಅವಶ್ಯಕ ಎಂಬುದು ಅನೇಕರ ಮನಸ್ಸಿಗೆ ಕಂಡುಬಂದಿದೆ. ಈಗ ನಾವು ನೋಡುವುದಾದರೆ ನಾಲ್ಕು ವರ್ಷದಲ್ಲಿ 15 ಸಾವಿರ ಮಕ್ಕಳು ಮಾಧ್ಯಮಿಕ ಶಾಲೆ ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದರು. ಈ ದಿವಸ 41 ಸಾವಿರ ಮಕ್ಕಳು ಕುಳಿತುಕೊಳ್ಳುತ್ತಿದ್ದಾರೆ ಇಷ್ಟು ಸಂಖ್ಯೆಯಲ್ಲಿ ಕುಳಿತುಕೊಳ್ಳುವ ಮಕ್ಕಳಿಗೆ ಪರೀಕ್ಷೆಯೆಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ.

ಪ್ರಶ್ನೆ ಪತ್ರಿಕೆಗಳನ್ನು ಅಚ್ಚು ಹಾಕಿಸಲಾಗುತ್ತಿದೆ. ಅಚ್ಚು ಹಾಕುವಾಗ ಆ ಪ್ರಶ್ನೆಗಳು ಮಕ್ಕಳಿಗೆ ಗೊತ್ತಾಗದ ರೀತಿಯಲ್ಲೂ, ಹೊರಗೆ ಬಾರದಂತೆಯೂ ನೋಡಿಕೊಳ್ಳತಕ್ಕದ್ದೂ ಬಹಳ ಶ್ರಮ ಸಾಧ್ಯವಾದ ಕೆಲಸವಾಗಿದೆ. ಹಾಗೆ ಬಹಳ ಕಟ್ಟಿನಲ್ಲಿ ಬಹಳ ರಹಸ್ಯವಾಗಿ ಪರೀಕ್ಷೆ ಪತ್ರಿಕೆಗಳನ್ನು ಅಚ್ಚುಹಾಕಿಸಿ ಪರೀಕ್ಷೆ ದಿವಸ ಮಕ್ಕಳಿಗೆ ಕೊಡುವುದು ಸರಿಯಾದ ಮಾರ್ಗ. ಆದರೆ ಅಧಿಕ ಸಂಖ್ಯೆಯಲ್ಲಿ ಅಚ್ಚು ಹಾಕಿಸುವುದರಿಂದ ರಹಸ್ಯವಾಗಿಡುವುದು ಕಷ್ಟವಾಗಿ ಅನೇಕ ಪಟ್ಟಣಗಳಲ್ಲಿರುವ ಮಕ್ಕಳಿಗೆ ಮೊದಲೇ ಎಲ್ಲಾ ಪ್ರಶ್ನೆಗಳೂ ಗೊತ್ತಾಗಿ, ಹಳ್ಳಿಗಳ ಶಾಲೆಗೆ ಹೋಗುವ ಮಕ್ಕಳಿಗೆ ಒಂದು ಪ್ರಶ್ನೆಯೂ ಗೊತ್ತಾಗದೆ ಬಹು ತೊಂದರೆಯುಂಟಾಗುವುದಕ್ಕೆ ಕಾರಣವಾಗಿದೆ. ಪರೀಕ್ಷೆಯ ಫಲತಾಂಶ ಪಟ್ಟಣದಲ್ಲಿ ಬರುವುದಕ್ಕೂ ಹಳ್ಳಿಯಲ್ಲಿ ಬರುವುದಕ್ಕೂ ಹೋಲಿಸಿ ನೋಡಿದರೆ ನಿಜವಾದ ಸಂಗತಿ ಗೊತ್ತಾಗುತ್ತದೆ. ಹೀಗೆ ಪ್ರಶ್ನೆ ಪತ್ರಿಕೆಗಳು ಹೊರಗೆ ಬರುತ್ತವೆಂದು ಗೊತ್ತಾಗಿ ಅವನ್ನು ಸಾಹಸಪಟ್ಟು ತಿಳಿದುಕೊಳ್ಳಬೇಕೆಂಬ ಒಂದು ದುಷ್ಟ ಪದ್ಧತಿ ಮಕ್ಕಳ ಮನಸ್ಸಿನಲ್ಲಿ ಮೂಡುವುದಕ್ಕೆ ಕಾರಣವಾಗಿದೆ. ಮಕ್ಕಳು ಸತ್ಪ್ರಜೆಗಳಾಗಬೇಕು, ಬಹಳ ನೀತಿವಂತರಾಗಬೇಕು ಎಂದು ಮನಸ್ಸಿರುವಾಗ, ಚಿಕ್ಕ ವಯಸ್ಸಿನ ಮಕ್ಕಳಿಗೆ ಪ್ರಶ್ನೆ ಪತ್ರಿಕೆಗಳನ್ನು ಪತ್ತೆ ಹಚ್ಚಿ ತೇರ್ಗಡೆಯಾಗೋಣ ಎಂಬ ಚಿತ್ತವೃತ್ತಿ ಬೆಳೆಯುವಂತೆ ಮಾಡುವುದು ಎಂದಿಗೂ ಸಾಧುವಲ್ಲ. ಇಷ್ಟೇ ಅಲ್ಲದೆ ಪರೀಕ್ಷೆ ಇನ್ನೊಂದು ವಾರ ಇರಬೇಕಾದರೆ ಪ್ರಶ್ನೆಗಳನ್ನು ಬರೆದು ತೆಗೆದುಕೊಂಡು ಬಂದು ಮಾಕೆ-ಟ್ಟಿನಲ್ಲಿ ತರ್ಕಾರಿ ಮಾರುವಂತೆ ಮಾರುವ ಪರಿಸ್ಥಿತಿ ಈಗ ಒದಗಿದೆ.

Sri H. K. SHIVARUDRAPPA.—On a point of order, Sir. Is it relevant, Sir?

Mr. SPEAKER.—The Hon'ble Member may please hear him.

ಶ್ರೀ ಎಸ್. ಕರಿಯಪ್ಪನವರು.—ಅಷ್ಟೇ ಅಲ್ಲದೆ 41,000 ಹುಡುಗರ ಪ್ರಶ್ನೆಪತ್ರಿಕೆಗಳನ್ನು ವ್ಯಾಲ್ಯು ಮಾಡಬೇಕಾದರೆ, ಅವುಗಳನ್ನು ಪರಿಶೀಲಿಸಿ ನೋಡಬೇಕಾದರೆ, ಅಂಕಗಳನ್ನು ಕೊಡಬೇಕಾದರೆ ಆಗತಕ್ಕ ಖರ್ಚು ಎಷ್ಟು ಎಂಬುದನ್ನು ತಾವು ಆಲೋಚನೆಮಾಡಬೇಕಾಗಿದೆ. ಹುಡುಗರು ಯಾರಾರು ಪರೀಕ್ಷಕರು ಎಂಬುದನ್ನು ಕಂಡುಹಿಡಿದು ಅವರ ಮನೆಗೆ ಸುತ್ತಿ, ಹಣವನ್ನಾದರೂ ಕೊಟ್ಟು ತೇರ್ಗಡೆ ಆಗುತ್ತಿರುವುದು ಅನೇಕರ ಗಮನಕ್ಕೆ ಬರದೇ ಇಲ್ಲ. ಹೀಗೆ ಅನೇಕ ವಿಧದಲ್ಲಿ ಮನುಷ್ಯನ ಶೀಲವನ್ನು ಹಾಳುಮಾಡತಕ್ಕ ನನ್ನಿ ವೇಶಗಳಿಗೆ ಅವಕಾಶ ಕೊಟ್ಟಿರತಕ್ಕ ಈ ಪದ್ಧತಿಯನ್ನು ತೆಗೆದುಹಾಕಬೇಕಾದದ್ದು ಯಾವ ದೃಷ್ಟಿಯಿಂದ ನೋಡಿದರೂ ಕೂಡ ತುಂಬಾ ಅವಶ್ಯಕ ಎಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಮತ್ತೊಂದು ಅಂಶವನ್ನು ಗಮನಿಸಬೇಕು. ಪರೀಕ್ಷೆಯನ್ನು ತೆಗೆದರೆ ಉಪಾಧ್ಯಾಯರು ಇನ್ನೇನು ಪರೀಕ್ಷೆ ಇಲ್ಲ, ಏನೂ ಇಲ್ಲ, ಹೆಚ್ಚುಜನ ಪಾಸ್ ಆದರು ಎಂದರೆ ಮೇಷ್ಟರು ಚೆನ್ನಾಗಿ ಪಾಠಹೇಳಿದ್ದಾರೆ ಎನ್ನುತ್ತಾರೆ ಇಲ್ಲದೇಇದ್ದರೆ ಚೆನ್ನಾಗಿ ಹೇಳಲಿಲ್ಲ ಎನ್ನುತ್ತಾರೆ ಎಂದು ಹೇಳಿ ಹೈಸ್ಕೂಲಿಗೆ ಹೋದಮೇಲೆ ಹುಡುಗರ ಗತಿ ಹೇಗಾದರೂ ಆಗಲಿ ಎಂದು ಹೇಳಿ ಉದಾಸೀನರಾಗಬಹುದು ಎಂಬುದಾಗಿ ಅನೇಕರು ಶಂಕೆಪಡುತ್ತಾರೆ. ನಾನು ಹೇಳುತ್ತೇನೆ, ಮದರಾಸಿನಲ್ಲಿ ಈ ಪದ್ಧತಿ ಏನೂಇಲ್ಲ. ಆದರೆ ಅಲ್ಲಿನ ಸ್ಟಾಂಡರ್ಡ್ ಕಡಮೆಯಾಗಿಲ್ಲ; ಉಪಾಧ್ಯಾಯರು ಆ ರೀತಿ ಉದಾ

ಸೀನ ಮನೋಭಾವದಿಂದ ಇದ್ದಾರೆ ಎಂಬುದಕ್ಕೆ ಯಾವ ದೃಷ್ಟಾಂತವೂ ಇಲ್ಲ. ಇಂಡಿಯಾ ದೇಶದಲ್ಲಿ ಈ ಪರೀಕ್ಷೆ ಇಲ್ಲದೇಯಿರತಕ್ಕಕಡೆ ಯಾವ ಒಂದು ಸ್ಟ್ಯಾಂಡರ್ಡ್ ಕಡಿಮೆಯಾಗಿರುವುದಾಗಲೀ ಉಪಾಧ್ಯಾಯರು ಉದಾಸೀನ ಮನೋಭಾವದಿಂದ ಇರುವುದಾಗಲೀ ಕಂಡು ಬಂದಿಲ್ಲ. ಆ ರೀತಿ ಶಂಕೆಪಡುವುದಕ್ಕೆ ಅವಕಾಶವಿಲ್ಲ. ಅಲ್ಲದೆ ಈಪರೀಕ್ಷೆಯನ್ನು ತೆಗೆಯುವುದರಿಂದ ಉಪಾಧ್ಯಾಯರಿಗೆ ಒಂದು ಬಗೆಯ ಸ್ವಾತಂತ್ರ್ಯವನ್ನು ಕೊಟ್ಟಂತೆ ಆಗುತ್ತದೆ. 'ಎಲ್ಲ ಮಕ್ಕಳ ಜವಾಬ್ದಾರಿಯನ್ನೂ ನಮ್ಮ ಮೇಲೆ ವಹಿಸಿದ್ದಾರೆ. ನಾವು ಅವರ ವಿದ್ಯಾಭಿವೃದ್ಧಿ, ಶೀಲ ಸ್ವಭಾವ ಇವುಗಳನ್ನು ಸರಿಯಾದ ರೀತಿಯಲ್ಲಿ ಬೆಳವಣಿಗೆ ಮಾಡಬೇಕಾದರೆ ಏನುಮಾಡಬೇಕೋ ಅದನ್ನು ಮಾಡಬೇಕು ಮತ್ತು ಅದು ನಮ್ಮ ಕರ್ತವ್ಯ' ಎಂದು ತಿಳಿದುಕೊಳ್ಳುವುದಕ್ಕೂ ಮತ್ತು ತಿಳಿದುಕೊಂಡು ಅದಕ್ಕೆ ಅನುಕೂಲವಾಗಿ ವರ್ತಿಸುವುದಕ್ಕೂ ಅವಕಾಶವಾಗುತ್ತದೆ. ಉಪಾಧ್ಯಾಯರುಗಳಿಗೆ ಈರೀತಿ ಒಂದು ಸ್ವಾತಂತ್ರ್ಯವನ್ನು ಕೊಟ್ಟು ಮಕ್ಕಳ ವಿಚಾರದಲ್ಲಿ ಸ್ವತಂತ್ರವಾಗಿ ಆಲೋಚನೆಮಾಡಿ, ಮಕ್ಕಳನ್ನು ತರಬೇತು ಮಾಡತಕ್ಕ ಜವಾಬ್ದಾರಿಯನ್ನು ಅರಿತು ನಡೆಯುವುದಕ್ಕೆ ಒಂದು ಅವಕಾಶವನ್ನು ಪರದೇಶಗಳಲ್ಲಿ ಕಲ್ಪಿಸಿರುವುದರಿಂದ ಆ ದೇಶಗಳಲ್ಲಿ ಹುಡುಗರು ಅಷ್ಟುಮಟ್ಟಿಗೆ ವಿದ್ಯಾಭ್ಯಾಸದಲ್ಲಾಗಲೀ ಇತರ ವಿಚಾರಗಳಲ್ಲಾಗಲೀ ಮುಂದುವರಿದಿರುವುದಕ್ಕೆ ಕಾರಣವಾಗಿದೆ. ಆದ್ದರಿಂದ ಈ ಪರೀಕ್ಷೆ ಹೋಗಬೇಕಾದದ್ದು ದೇಶದ ಹಿತದೃಷ್ಟಿಯಿಂದ, ಮುಂದಿನ ಪ್ರಜೆಗಳ ಹಿತದೃಷ್ಟಿಯಿಂದ, ಮಕ್ಕಳ ಹಿತದೃಷ್ಟಿಯಿಂದ, ಉಪಾಧ್ಯಾಯರ ಹಿತದೃಷ್ಟಿಯಿಂದ ಎಲ್ಲಾ ದೃಷ್ಟಿಯಿಂದಲೂ ಸಾಧುವಾಗಿದೆ. ಇಷ್ಟು ಹೇಳಿ ಇದನ್ನು ಪರ್ಯಾಲೋಚನೆಗೆ ಸಭೆಯ ಮುಂದಿಟ್ಟಿದ್ದೇನೆ.

Mr. SPEAKER.—Resolution moved:

"That this Assembly is of the opinion that the Middle School Examination be abolished."

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಇದೇ ರೀತಿಯ ನಿರ್ಣಯವನ್ನು ನಾನೂ ಕಳುಹಿಸಿದ್ದೇನೆ.

Mr. SPEAKER.—These resolutions are arranged in the order of ballot. That is the main difficulty in clubbing all these resolutions together.

ಶ್ರೀ ಬಿ. ಎಕ್. ಬೋರಣ್ಣಗೌಡರು (ಬೇಲೂರು).—ನನ್ನ ನಿರ್ಣಯವೂ ಸಹ ಇದೇರೀತಿ ಇದೆ.

ಅಧ್ಯಕ್ಷರು.—ತಾವು ಕಳುಹಿಸಿರುವುದರಲ್ಲಿ ಸ್ವಲ್ಪ ವ್ಯತ್ಯಾಸವಿದೆ. 1953-54ನೇ ಸಾಲಿನಿಂದ ವಜಾ ಮಾಡಬೇಕೆಂದು ಒಂದು ಕಾಲ ನಿಗದಿಮಾಡಿದ್ದೀರಿ.

ಶ್ರೀ ಬಿ. ಹುಚ್ಚೇಗೌಡರು.—ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ನ್ಯಾಯಾಂಗ ಮತ್ತು ವಿದ್ಯಾಶಾಖೆಯ ಸಚಿವರು).—ತಾವು ಕಳುಹಿಸಿರುವ ನಿರ್ಣಯವೂ ಇದೇ ರೀತಿ ಇರುವುದರಿಂದ ತಾವು ಮಾತನಾಡಬಹುದು.

ಶ್ರೀ ಬಿ. ಹುಚ್ಚೇಗೌಡರು.—ಸ್ವಾಮಿ, ಶ್ರೀವರ್ಮಾ ಕರಿಯಪ್ಪನವರು ಈ ನಿರ್ಣಯದ ವಿಚಾರವಾಗಿ ಎಲ್ಲ ವಿಷಯಗಳನ್ನೂ ಹೇಳಿದ್ದಾರೆ. ಆದ್ದರಿಂದ ಒಂದೆರಡು ವಿಚಾರಗಳನ್ನು ಮಾತ್ರ ನಾನು ಹೇಳುತ್ತೇನೆ. ಸ್ವಾಮಿ, ಮೊದಲನೆಯದಾಗಿ ಈ ಪರೀಕ್ಷೆ ಅಕ್ಕಪಕ್ಕದ ಇತರ ಯಾವ ಸಂಸ್ಥಾನಗಳಲ್ಲೂ ಕೂಡ ಇಲ್ಲ. ಅಲ್ಲದೆ ಇಲ್ಲಿಯವರೆಗೂ ಕೂಡ ಉಪಾಧ್ಯಾಯರಿಗೆ ಒಂದು ಅಭಾವ ಇತ್ತು. ಆದ್ದರಿಂದ ಎಲ್. ಎಸ್. ಆದವರನ್ನು ಉಪಾಧ್ಯಾಯರಾಗಿ ತೆಗೆದುಕೊಳ್ಳುತ್ತಿದ್ದರು. ಅದು ಒಂದು ಕ್ವಾಲಿಫಿಕೇಷ್ಷ ಆಗಿತ್ತು. ಅದಕ್ಕೆ ಒಂದು ಗೌರವ ಇತ್ತು ಎಂದು ಭಾವಿಸಬಹುದು. ಹಿಂದೆ ನಮ್ಮ ಕಾಲದಲ್ಲಿ ಎಲ್. ಎಸ್. ಪರೀಕ್ಷೆಗೆ ಕೂಡುವವರು 5,000 ಜನ ಆಗಿದ್ದರೆ ಈಗ 40 ಸಾವಿರ ಜನ ಆಗಿದ್ದಾರೆ. ಎಸ್.ಎಸ್.ಎಲ್.ಸಿ.ಗೆ 20 ಸಾವಿರ ಜನ ಆಗಿದ್ದಾರೆ. ಆದ್ದರಿಂದ ಸ್ಕೂಲ್ ಮೇಷ್ಟರ ಅಭಾವ ಖಂಡಿತ ಬರುವುದಿಲ್ಲವೆಂಬುದು ಇದರಿಂದ ಗೊತ್ತಾಗುತ್ತದೆ. ಇನ್ನೊಂದು ಏನೆಂದರೆ ಎಂ. ಎಸ್. ಪರೀಕ್ಷೆ ಬಿಟ್ಟು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆ ಆಗಿರುವವರನ್ನೇ ಉಪಾಧ್ಯಾಯರಾಗಿ ತೆಗೆದುಕೊಳ್ಳಬೇಕು ಎಂಬ ಆ ಒಂದು ಕ್ವಾಲಿಫಿಕೇಷ್ಷ ಇರುವುದರಿಂದ ನಮಗೆ ಬಹಳ ಅನುಕೂಲವಾಗುತ್ತದೆ. ಈಗ ಎಂ. ಎಸ್. ಪರೀಕ್ಷೆ ಪಾಸ್ ಮಾಡಿದವರಿಗೆ ಮೂರುವರ್ಷ ಟ್ರೈನಿಂಗ್ ಇಟ್ಟಿದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸ್‌ಮಾಡಿದವರಿಗೆ ಒಂದುವರ್ಷ ಟ್ರೈನಿಂಗ್ ಇಟ್ಟಿದ್ದಾರೆ. ಉಪಾಧ್ಯಾಯರಾಗುವುದಕ್ಕೆ ಅನೇಕ ಸೌಕರ್ಯಗಳು ದೊರೆಯುತ್ತಿವೆ. ಆದ್ದರಿಂದ ಈ ಪರೀಕ್ಷೆಯನ್ನು ತೆಗೆದುಹಾಕಿದರೆ ಮುಂದೆ ಹೆಚ್ಚು ಕ್ವಾಲಿಫಿಕೇಷ್ಷ ಉಳ್ಳವರು ಉಪಾಧ್ಯಾಯರಾಗಿ ಬರುವುದಕ್ಕೆ ಅನುಕೂಲವಾಗುತ್ತದೆ. ಶ್ರೀವರ್ಮಾ ಕರಿಯಪ್ಪನವರು ಹೇಳಿದಹಾಗೆ ಒಂದುವೇಳೆ ಈ ಪರೀಕ್ಷೆಯನ್ನು ತೆಗೆದುಹಾಕಿದರೆ ಹುಡುಗರ ಒಂದು ಸ್ಟ್ಯಾಂಡರ್ಡ್ ಗೊತ್ತಾಗುವುದಿಲ್ಲ, ಸ್ಟ್ಯಾಂಡರ್ಡ್ ಕಮ್ಮಿಯಾಗುತ್ತದೆ ಎಂಬುದಾಗಿ ಕೆಲವರು ಶಂಕೆಪಡಬಹುದು. ಅದಕ್ಕೆ ಅವಕಾಶವಿಲ್ಲ. ಒಂದು ಉದಾಹರಣೆ ಹೇಳುವುದಾದರೆ ನಮ್ಮ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಈ ತರಹ ಒಂದು ಪರೀಕ್ಷೆ ಇಲ್ಲವೇಇಲ್ಲ. ಪರೀಕ್ಷೆ ಫಲಿತಾಂಶ ಶೇಕಡ 80-85 ಬರುತ್ತಾ ಇದೆ. ಆದ್ದರಿಂದ ಆ ದೃಷ್ಟಿ ಮುಖ್ಯವಾದದ್ದಲ್ಲ. ಪ್ರೈಮರೀ ಸ್ಕೂಲು ಆದ ನಂತರ ಮಿಡ್ಲ್‌ಸ್ಕೂಲ್‌ಗೆ ಬರಬೇಕಾದರೆ ಈ ತರಹ ಒಂದು ಪರೀಕ್ಷೆ ಏನೂಇಲ್ಲ. ಅದಾಕ್ಷಣಕ್ಕೇ ಅದು ಒಂದು ದಕ್ಷತೆಯ ಕುಂದನ್ನು ತೋರಿಸುತ್ತದೆ ಎಂದು ಅರ್ಥವಾಗುವುದಿಲ್ಲ. ಸಣ್ಣ ಮಕ್ಕಳಿಗೆ ಇಷ್ಟು ಭಾರವನ್ನು ಹೊರಿಸುವುದು ಸರಿಯಲ್ಲವೆಂದು ನನ್ನ ಭಾವನೆ. ಈಗಿನ ನಂದರ್ಭದಲ್ಲಿ ಏನಾಗಿದೆಯೆಂದರೆ ಪಾಠಶಾಲೆಗಳಲ್ಲಿ ಓದತಕ್ಕ ನಮ್ಮ ಮಕ್ಕಳಿಗೆ 10-12 ಪುಸ್ತಕಗಳನ್ನು ಕೊಡಿಸುತ್ತಾ ಇದ್ದೇವೆ. ಎರಡುಮೂರು ಪುಸ್ತಕಗಳನ್ನೂ ಸಹ ಉಪಯೋಗ ಮಾಡುವುದಿಲ್ಲ. ಸುಮ್ಮನೆ ಶಾಲೆಗೆ ಪುಸ್ತಕಗಳನ್ನು ಹೊತ್ತುಕೊಂಡು ಹೋಗುತ್ತಾರೆ. ಈ 12 ಪುಸ್ತಕಗಳನ್ನು 10 ವರ್ಷದ ಚಿಕ್ಕ ಹುಡುಗರು ಸಂಪೂರ್ಣವಾಗಿ ಓದಿ ತಿಳಿದುಕೊಂಡು, ಜ್ಞಾಪಕದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವೇ? ಅಲ್ಲದೆ ಅಂಥ ಚಿಕ್ಕ ವಯಸ್ಸಿನಲ್ಲಿ ಉದ್ದಕ್ಕೂ ಒಂದು ಆತಂಕ ಇಟ್ಟು ಅವರ ಮನಸ್ಸಿನಮೇಲೆ ಒಂದು ಹೊರೆಯನ್ನು ಹಾಕುವುದು ಧರ್ಮವಾದದ್ದಲ್ಲವೆಂದು ಹೇಳಿ ಶ್ರೀವರ್ಮಾ ಕರಿಯಪ್ಪನವರು ತಂದಿರುವ ಈ ನಿರ್ಣಯಕ್ಕೆ ಪೂರ್ಣ ಅನುಮೋದನೆ ಕೊಡುತ್ತೇನೆ.

Sri R. ANANTARAMAN (Chamarajpet).—I want certain information from

(ಶ್ರೀ ಆರ್. ಅನಂತರಾಮಕ್ಕರವರು).

the Hon'ble Minister. ಈ ಪರೀಕ್ಷೆಗೆ ಹಣ ಕಟ್ಟುವುದರಲ್ಲಿ ಸರ್ಕಾರದವರಿಗೆ ಖರ್ಚು ಕಳೆದು ಎಷ್ಟು ಉತ್ಪತ್ತಿ ಬರುತ್ತದೆ?

2-30 P.M.

ಶ್ರೀ ಬಿ. ಎನ್. ಬೋರಣ್ಣಗೌಡರು (ಬೇಲೂರು).—ಅಧ್ಯಕ್ಷರೇ, ಶ್ರೀಮಾನ್ ಕರಿಯಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ತಿಳಿಸಲಪೇಕ್ಷಿಸುತ್ತೇನೆ. ಇಂಗ್ಲೀಷು ಪಾಠಶಾಲೆಗಳಲ್ಲಿ ಪಾಠಹೇಳತಕ್ಕ ಕ್ರಮಕ್ಕೂ ನಮ್ಮ ಪಾಠಪ್ರವಚನಗಳನ್ನು ನಡೆಸತಕ್ಕ ಕ್ರಮಕ್ಕೂ ಬಹಳ ವ್ಯತ್ಯಾಸವಿದೆ. ಅಲ್ಲಿ ಮಾನಸಿಕ ಬೆಳವಣಿಗೆಗೆ ಎಷ್ಟು ಆವಶ್ಯಕವಾಗಿ ವಿದ್ಯಾಭ್ಯಾಸವಾಗಬೇಕೋ, ಅಂಥ ರೀತಿಯಲ್ಲಿ ಶಿಕ್ಷಣ ಕೊಡಲು ತರಪೇತಾದ ಉಪಾಧ್ಯಾಯರನ್ನೇ ನೇಮಿಸುತ್ತಾರೆ. ಮಕ್ಕಳಿಗೆ ಪಾಠ ತಾವು ಓದುತ್ತೇವೆ, ಆಥವ ತಾವು ಓದಬೇಕು, ಬುದ್ಧಿವಂತರಾಗಬೇಕೆ ಬಯೋಜನೆಕೂಡ ಬಾರದಂತೆ ಸರಿಯಾದ ವ್ಯವಸ್ಥೆಮಾಡಿಕೊಂಡು ಆಟದ ಜೊತೆಯಲ್ಲೇ ಪಾಠ ಕಲಿಸುತ್ತಾರೆ. ನಮ್ಮ ದೇಶದಲ್ಲಿ ಅಂತೂ ಈ ರೀತಿಯಾದ ಅವಕಾಶವಿಲ್ಲದೆ ಎಲ್ಲವನ್ನೂ ಬಾಯಿಗೆ ತುಂಬಿ ಅದು ಜೀರ್ಣವಾಗಲಿ, ಅಥವಾ ಆಗದಿರಲಿ, ಏನೇ ತೊಂದರೆಯಿರಲಿ, ಪರೀಕ್ಷೆಯಿದೆ ಎಂದು ಹೇಳಿ ಓದಿಸುತ್ತಿರುತ್ತೇವೆ. ಈರೀತಿ ಪಾಠ ಹೇಳಿಕೊಟ್ಟು ಪರೀಕ್ಷೆಗೆ ಕೂರಿಸುತ್ತಿರುವುದು ಸರ್ವೇಸಾಮಾನ್ಯವಾಗಿ ಬಿಟ್ಟಿದೆ. ನನಗೆ ಗೊತ್ತಿರುವಹಾಗೆ 9 ವರ್ಷ, 7 ವರ್ಷದ ಮಕ್ಕಳು ಕೂಡ ಪರೀಕ್ಷೆಗೆ ಕುಳಿತಿರುವ ಸಂದರ್ಭಗಳಿವೆ. ಇದರಿಂದ ಮಕ್ಕಳ ಬೆಳವಣಿಗೆಗೆ ಎಷ್ಟು ಕುಂದುಕವಾಗುತ್ತದೆಂಬುದನ್ನು ಯೋಜನೆ ಮಾಡಬೇಕು. ಮನೆಯಲ್ಲಿ ಓದುವ ಮಕ್ಕಳಿರುವವರೆಲ್ಲರಿಗೂ ಸಾಮಾನ್ಯವಾಗಿ ಅನುಭವಕ್ಕೆ ಬಂದಿರುತ್ತದೆ, ಮಕ್ಕಳು ಯಾವಾಗಲೂ ಪರೀಕ್ಷೆ, ಪರೀಕ್ಷೆ ಎಂದು ಓದುತ್ತಿರುವುದು. ಸ್ಕೂಲು ಷುರುವಾಗಿ ಪಾಠಪ್ರವಚನಗಳು ಪ್ರಾರಂಭವಾಯಿತೆಂದರೆ ಒಂದೆರಡು ತಿಂಗಳಲ್ಲೇ I term, ಅಲ್ಲಿಂದ ಕೆಲವೇ ದಿನಗಳಿಗೆ II term ಬಂದೇಬಿಡುತ್ತದೆ. ಮುಂದಿನ ಎರಡುಮೂರು ತಿಂಗಳಿಗೇ ಕೊನೆಯ term—ಹೀಗಾಗಿ ವರ್ಷಾದ್ಯಂತ ಪರೀಕ್ಷೆಗಳ ಯೋಚನೆಯೇ ಅವರಿಗಾಗಿರುತ್ತದೆ. ಹೀಗೆ ಪರೀಕ್ಷೆ ಎಂಬ ಕೆಟ್ಟ ಭಾವನೆ ಅವರ ಮನಸ್ಸಿನಮೇಲೆ ಮಾಡಿ, ಅವರ ಬೆಳವಣಿಗೆಗೆ ದುಷ್ಪರಿಣಾಮವನ್ನುಂಟುಮಾಡುತ್ತದೆಂದು ಎಲ್ಲರೂ ಅಭಿಪ್ರಾಯ ಪಡುತ್ತಾರೆಂದು ನಾನು ನಂಬಿದ್ದೇನೆ. ಚಿಕ್ಕವಯಸ್ಸಿನಲ್ಲಿ ಈರೀತಿಯಾದ ಭೀತಿ ಅವರಿಗುಂಟಾದರೆ, ಅವರ ಮಾನಸಿಕ ವಿಕಾಸಕ್ಕೆ ಅವಕಾಶ ಕೊಡದಂತೆ, ಅವರನ್ನು ಈರೀತಿ ಗಟ್ಟಿಮಾಡಿ, ಆರೀತಿ ಗಟ್ಟಿಮಾಡಿ ಎಂದು ಉಪಾಧ್ಯಾಯರು ಬಲಾತ್ಕರಿಸುತ್ತಿದ್ದರೆ, ಹುಡುಗರು ಮುಂದೆ ಸ್ವತಂತ್ರವಾಗಿ ಬಾಳ್ವೆ ನಡೆಸುವ ಧೈರ್ಯ ಹೇಗೆ ಬಂದೀತು? ಈ ಪರೀಕ್ಷೆ ಇಲ್ಲದಿದ್ದ ಪಕ್ಷದಲ್ಲಿ ಮಕ್ಕಳ ಬೆಳವಣಿಗೆಗೆ ಬಹಳ ಅನುಕೂಲವಾಗುತ್ತದೆ. ಈ ಸಂದರ್ಭದಲ್ಲಿ ಶ್ರೀಮಾನ್ ಹುಚ್ಚೇಗೌಡರು ಒಂದು ವಿಷಯವನ್ನು ಹೇಳಿದರು, ಅದನ್ನು ನಾನೂ ಒಪ್ಪುತ್ತೇನೆ: ಸಾಮಾನ್ಯವಾಗಿ ಹಿಂದೆ ಉಪಾಧ್ಯಾಯರುಗಳ ಸಂಖ್ಯೆ ಬಹಳ ಕಡಮೆ ಇದ್ದಾಗ, ಅಲ್ಪಸ್ವಲ್ಪ ಓದಿದವರನ್ನೇ ಈ ಉಪಾಧ್ಯಾಯರ ಸ್ಥಾನಕ್ಕೆ ತಗೆದುಕೊಳ್ಳುವುದಕ್ಕಾಗಿ ಹೀಗೊಂದು ಪರೀಕ್ಷೆಯಿರಬೇಕೆಂದು ಹೇಳಿರಬಹುದು. ಈಗ ಈ ಎಲ್.ಎಸ್. ಪರೀಕ್ಷೆ ಮಾಡಿದವರಿಗಿಂತ ಎಸ್.ಎಸ್.ಎಲ್.ಸಿ. ಮಾಡಿರುವವರು ಮತ್ತು ಇನ್ನೂ ಹೆಚ್ಚಿಗೆ ಅರ್ಹತೆಪಡೆದಿರುವವರು ಕೆಲಸಕ್ಕೆ ಮುಂದಕ್ಕೆ ಬರುತ್ತಿರುವುದರಿಂದ ಇಂಥಾ ಲೋಯರ್ ಸೆಕೆಂಡರಿ ಅರ್ಹತೆಯುಳ್ಳ ಉಪಾಧ್ಯಾಯರುಗಳು ಅಷ್ಟಾಗಿ ಬೇಕಾಗಿಲ್ಲ. ಈಗ ನಮ್ಮನೆ ಪರೀಕ್ಷೆಯಿರುವುದರಿಂದ ಅಲ್ಲಲ್ಲೇ ಹುಡುಗರು ಉಳಿದು, ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದಕ್ಕಾಗದೆ, ಇದೇ ತಮ್ಮ ವಿದ್ಯೆಯ ಕೊನೆಯಿರಬಹುದು, ಹೇಗೂ ತೇರ್ಗಡೆಯಾಗುವುದು ಹಣೆಯಲ್ಲಿ ಬರೆಯಲಿಲ್ಲವೆಂದು ಬೇರೆ ರೀತಿಯ ಕೆಲಸಗಳನ್ನು ಅವಲಂಬಿಸಿ ಹೊರಡುತ್ತಾರೆ.

ಇದೆಲ್ಲಾ ಅಂಶಗಳನ್ನು ತಾವು ಪರಿಶೀಲನೆಗೆ ತೆಗೆದುಕೊಳ್ಳುವುದಾದರೆ, ತಾವಿಂದು ಕೊಡುತ್ತಿರುವ ಶಿಕ್ಷಣ ಅನಮಂಜಸವಾಗಿ ಕಾಣುತ್ತದೆ. ಶ್ರೀ ಕರಿಯಪ್ಪನವರು ಹೇಳಿದಂತೆ ಪರೀಕ್ಷೆಗಳನ್ನು ಮಾಡುತ್ತಿರುವ ರೀತಿ ಮತ್ತು ಪ್ರಶ್ನೆ ಪತ್ರಿಕೆಗಳ ರೀತಿಯನ್ನು ನೋಡಿದರೆ ಅವು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಅನ್ನಬೇಕು. ಮಕ್ಕಳ ಬೆಳವಣಿಗೆಗೆ ಸರಿಯಾದ ವ್ಯವಸ್ಥೆಯಾಗಬೇಕೆಂದು ಹೇಳುವ ನಾವು ಈವತ್ತು ಒಂದು ವ್ಯವಸ್ಥೆ ಮಾಡಬೇಕಾದರೆ ಈ ಲೋಯರ್ ಸೆಕೆಂಡರಿ ಸ್ಕೂಲು ಪರೀಕ್ಷೆಗಳನ್ನು ತೆಗೆದುಹಾಕಿ, ಎಸ್.ಎಸ್.ಎಲ್.ಸಿ ಯಲ್ಲಿ ತೇರ್ಗಡೆಯಾಗಿರುವವರೇ ಸಾಕೆಂದು ಹೇಳುವವರಲ್ಲ ನಾನೂ ಒಬ್ಬ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಅಧ್ಯಕ್ಷರೇ, ಮಿಡ್ಲ್‌ಸ್ಕೂಲ್ ಪರೀಕ್ಷೆಯನ್ನು ತೆಗೆದುಹಾಕಬೇಕು ಎಂಬುದರಲ್ಲಿ ಅವರಿಗೇನು ಕಷ್ಟವಿದೆ, ಏಕೆ ತೆಗೆಯಬೇಕು ಎಂಬುದಕ್ಕೆ ಈ ನಿರ್ಣಯದ ಸೂಚಕರು ಅಷ್ಟು ಸಮರ್ಪಕವಾದ ವಿವರಣೆಯನ್ನು ಕೊಡಲಿಲ್ಲ. ಕೇವಲ ಅವರು ಮದರಾಸಿನಲ್ಲಿಲ್ಲ ಅಲ್ಲಲ್ಲ, ಇಲ್ಲಿಲ್ಲ ಎಂದು ಹೇಳಿದರೇ ಹೊರತು ಇನ್ನೇನೂ ಇಲ್ಲ. ಆದರೆ, ಮುಖ್ಯವಾಗಿ ವಿದ್ಯಾಭ್ಯಾಸ ಪದ್ಧತಿ (System of Education) ಎಂಬುದೇ ಹಳ್ಳಿದ್ದು ಇಂಗ್ಲೆಂಡಿನಲ್ಲಿ. ಅಂಥ ಕಡೆ ಈಗಲೂ ನೋಡುವುದಾದರೆ, ಆಕ್ಸ್‌ಫರ್ಡ್‌ನಲ್ಲಿ ಪ್ರೈಮರಿ ಲೋಕಲ್ ಪರೀಕ್ಷೆ, ಜೂನಿಯರ್ ಲೋಕಲ್ ಪರೀಕ್ಷೆ ಮತ್ತು ಸೀನಿಯರ್ ಲೋಕಲ್ ಪರೀಕ್ಷೆ ಎಂಬವು ಜಾರಿಯಲ್ಲಿದ್ದೇ ಇವೆ. ಹಾಗೆಯೇ ಕೇಂಬ್ರಿಡ್ಜ್‌ನಲ್ಲಿಯೂ ಪ್ರೈಮರಿ ಲೋಕಲ್, ಜೂನಿಯರ್ ಲೋಕಲ್ ಮತ್ತು ಸೀನಿಯರ್ ಲೋಕಲ್ ಪರೀಕ್ಷೆಗಳನ್ನೇನೂ ತಪ್ಪಿಸಿಲ್ಲ.

ಈಗ ನಮ್ಮಲ್ಲಿರುವ ಮಿಡ್ಲ್‌ಸ್ಕೂಲು ಪರೀಕ್ಷೆಯಾಗಲೀ, ಸೆಕೆಂಡರಿ ಪರೀಕ್ಷೆಯಾಗಲೀ, ಯೂನಿವರ್ಸಿಟಿ ಪರೀಕ್ಷೆಯೇನೂ ಅಲ್ಲ. ಈ ಲೋಕಲ್ ಪರೀಕ್ಷೆಗಳಲ್ಲಿ ಇವು ಒಂದು ಗ್ರೇಡನ್ನುಮಾತ್ರ ಸೂಚಿಸುತ್ತವೆ. ಅಂಥ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳವರೇ ಈ ಪರೀಕ್ಷೆಗಳನ್ನು ಬಿಡದೆ, ತಮ್ಮ ತಮ್ಮ ದೇಶದಲ್ಲಿ ಜೂನಿಯರ್ ಲೋಕಲ್, ಸೀನಿಯರ್ ಲೋಕಲ್ ಎಂದು ಇಟ್ಟುಕೊಂಡಿರುವಾಗ, ನಾವಿಲ್ಲಿ ಮಿಡ್ಲ್‌ಸ್ಕೂಲು ಪರೀಕ್ಷೆಗಳು ಬೇಡವೆಂದು ವಾದಿಸುವುದರಲ್ಲಿ ಅರ್ಥವಿಲ್ಲ.

Sri B. N. BORANNA GOWDA.—These examinations are on a par with Matriculation examination.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲದೆ, ಪರೀಕ್ಷೆಯೆಂಬುದಿರುತ್ತದೆ. ಅದನ್ನಾದರೂ ಬೇಡವೆಂದಿಲ್ಲ. ಪಬ್ಲಿಕ್ ಪರೀಕ್ಷೆ ಮಾತ್ರ ಬೇಡವೆಂದಿದ್ದೇವೆ ಅಷ್ಟೆ.

ಶ್ರೀ ಎಂ. ಶಂಕರಲಿಂಗೇಗೌಡರು.—ಅಲ್ಲಿ ಜೂನಿಯರ್ ಲೋಕಲ್, ಸೀನಿಯರ್ ಲೋಕಲ್ ಎಂದಿದೆ. Junior local is equal to S. S. L. C. Senior Local is equal to Intermediate

and the people who go to the University will have to pass this Intermediate examination. ಈ ರೀತಿಯಾಗಿ ಅಂಥ ವಿದ್ಯಾಭ್ಯಾಸದಲ್ಲಿ ಮುಂದುವರಿದ ದೇಶಗಳಲ್ಲೇ, ಅಷ್ಟು ಅನುಭವಸ್ಥರು ಈ ಮೂರು ಪರೀಕ್ಷೆಗಳನ್ನೂ ಇಟ್ಟುಕೊಂಡಿರಬೇಕೆನ್ನುವಾಗ ನಾವು, ಇಷ್ಟೆಲ್ಲಾ ಪರೀಕ್ಷೆಗಳನ್ನೂ ಇಟ್ಟುಕೊಂಡೂ ಲಿಟರಿಸಿಯಲ್ಲಿ 13·5%ನಲ್ಲಿ ಇನ್ನೂ ಉಳಿದಿರುವವರು, ಈರೀತಿ ಮಿಡ್ಲ್‌ಸ್ಕೂಲು ಪರೀಕ್ಷೆಯನ್ನು ವಜಾಮಾಡಿಬಿಡುವುದರಿಂದ ಆಗುವ ಫಲವೇನು? ಅಲ್ಲದೆ ನೀವೇ ಕೇಳುತ್ತಿದ್ದೀರಿ—ಹೈಸ್ಕೂಲುಗಳಲ್ಲಿ ಸೀಟ್ ಕೊಡುವುದಕ್ಕೆ ಅವಕಾಶವಿಲ್ಲದೆ—ಆತನಿಗೆ ಲೋಯರ್ ಸೆಕೆಂಡರಿ ಸರಿಯಾಗಿ ಪಾಸಾಗಿದೆಯೇ ಎಂದು. ಇಂದು ಇದನ್ನೂ ತೆಗೆದುಹಾಕಿಬಿಟ್ಟರೆ, ಪೂರ್ವದಲ್ಲಿ ಮರಿಮಲ್ಲಪ್ಪನವರ ಸ್ಕೂಲಿಗೆ ಹುಡುಗರನ್ನು ಸೇರಿಸಿಕೊಳ್ಳುತ್ತಿದ್ದ ರೀತಿಗೆ ಬಂದಂತಾಗುತ್ತದೆ. ಎಲ್ಲೂ ಸೀಟ್‌ಸಿಕ್ಕಲಿಲ್ಲ ಅಂದರೆ ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ಸಿಕ್ಕಿಯೇ ಸಿಕ್ಕುತ್ತದೆ ಎಂದು ಆತನಿಗೆ ಬರೀ ರುಜು ಮಾಡುವುದಕ್ಕೆ ಬರುತ್ತಿದ್ದರೇ ಸಾಕು, ಒಂದು ವರ್ಷದ ಫೀಜನ್ನು ಕೊಟ್ಟು ಸೇರಿಕೊಂಡು ಬಿಡುತ್ತಿದ್ದರು. ಆದ್ದರಿಂದ ಸ್ಕೂಲ್‌ಗೆ ಸೇರಿಸಿಕೊಳ್ಳುವುದಕ್ಕೆ ಒಂದು ರೀತಿಯ check ಇರಬೇಕಾದ್ದು ಅವಶ್ಯಕ.

ನಮ್ಮ ಮಾನ್ಯ ಸ್ನೇಹಿತರಾದ ಕರಿಯಪ್ಪನವರೂ, ಬೋರಣ್ಣಗೌಡರೂ ಬಹಳ ಅನುಭವಸ್ಥರೇನೋ ಹೌದು; ಆದರೂ ಅವರಿಗಿರುವ ತೊಂದರೆಯೇನೆಂಬುದನ್ನು ಸರಿಯಾಗಿ ಹೇಳಲಿಲ್ಲ. ನನಗಂತೂ ಅವರ ಉದ್ದೇಶ ಅರ್ಥವಾಗಲಿಲ್ಲ. ಈಗ 41,000 ಜನ ಮಿಡ್ಲ್‌ಸ್ಕೂಲು ಪರೀಕ್ಷೆಗೆ ಹೋಗಬಹುದು; ಅದರಲ್ಲಿ 20,000 ಜನ ತೇರ್ಗಡೆಯಾಗಿ ಎಷ್ಟು ಜನ ಮಾತ್ರ ಹೈಸ್ಕೂಲಿಗೆ ಹೋಗುತ್ತಾರೆ, ಈಗ ಇದನ್ನು ತೆಗೆಯಹಾಕಿಬಿಟ್ಟು ಉಪಾಧ್ಯಾಯರ ಕೈಗೆ ಬಿಟ್ಟುಬಿಟ್ಟರೆ ಏನು ಪರಿಣಾಮ ಎಂಬುದನ್ನು ಯೋಚನೆಮಾಡಿ. ಆದ್ದರಿಂದ ಇನ್ನೂ ಕೊಂಚ ದಿವಸ ಈ ಪರೀಕ್ಷೆ ಇರಬೇಕೆಂದು ನನ್ನ ಅಭಿಪ್ರಾಯ. ಆದಕಾರಣದಿಂದ ನಾನು ವಿರೋಧಿಸುತ್ತಿದ್ದೇನೆಯೇ ಹೊರತು ಇನ್ನೇನೂ ಅಲ್ಲವೆಂದು ಹೇಳಿ ನಾನು ಈ ನಿರ್ಣಯವನ್ನು ವಿರೋಧಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ).—ಅಧ್ಯಕ್ಷರೇ, ಮಾನ್ಯ ಸದಸ್ಯರು ತಂದಿರತಕ್ಕ ನಿರ್ಣಯವನ್ನು ನಾನು ಅನುಮೋದಿಸುತ್ತಾ, ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಮಿಡ್ಲ್ ಸ್ಕೂಲಿನಲ್ಲಿ ಪಬ್ಲಿಕ್ ಪರೀಕ್ಷೆಗಳನ್ನು ವಜಾಮಾಡಬೇಕೆಂಬ ಈ ತೆರದ ನಿರ್ಣಯ ಸಭೆಯಲ್ಲಿ ಇದೇ ಮೊದಲನೆಯ ಸಾರಿ ಬಂದಿದ್ದಲ್ಲ. ಹಿಂದೆ ಇದ್ದಂಥ ಪ್ರಜಾಪ್ರತಿನಿಧಿ ಸಭೆಯಲ್ಲೂ ಕೂಡ ಈ ವಿಷಯ ಚರ್ಚೆಗೆ ಬಂದು ಅನೇಕ ಸಾರಿ ಈ ಪರೀಕ್ಷೆಗಳನ್ನು ವಜಾಮಾಡಬೇಕೆಂದು ಸೂಚಿಸಿದ್ದಾರೆ.

ಈ ಸಾರಿ ಈ ನಿರ್ಣಯದ ಮೇಲೆ ಚರ್ಚೆ ಮಾಡುವ ಕಾಲದಲ್ಲಿ ಇದನ್ನು ಏಕೆ ಅವಶ್ಯಕವಾಗಿ ವಜಾಮಾಡಬೇಕೆಂಬುದನ್ನು ಅನೇಕ ಕಾರಣಗಳ ಮೇಲೆ ಮಾನ್ಯ ಸದಸ್ಯರು ಸಮರ್ಥಿಸಿದ್ದಾರೆ. ಅದರಲ್ಲಿ ಮುಖ್ಯವಾದುದು, ಈಗಿನ ಮನಶ್ಶಾಸ್ತ್ರಶೋಧನೆಯ ರೀತ್ಯಾ 10–11 ವರ್ಷ ವಯಸ್ಸಿನ ಮಕ್ಕಳನ್ನು ಇಂಥ ಪರೀಕ್ಷೆಗಳಿಗೆ ಗುರಿಮಾಡುವುದು ಮಕ್ಕಳಿಗೆ ಬಹಳ strain ಉಂಟು ಮಾಡುತ್ತದೆ, ಆದ್ದರಿಂದ ಮಕ್ಕಳನ್ನು ಬಾಧಿಸಬಾರದು ಎಂದು ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸ್ಕೂಲುಗಳಲ್ಲಿ ಉಪಾಧ್ಯಾಯರಾಗಿರತಕ್ಕವರ ಅಭಿಪ್ರಾಯವನ್ನು ಕೇಳಿದ್ದಕ್ಕೆ ಅವರೂ ಕೂಡ ಇದೇ ಅಂಶವನ್ನು ಸಮರ್ಥಿಸಿದರು. ಚಿಕ್ಕವಯಸ್ಸಿನ, ಇನ್ನೂ ಪುಟ್ಟ ಮಕ್ಕಳಿಗೆ ಇಷ್ಟು ಗುರುತರವಾದ strain ಉಂಟು ಮಾಡುವುದು ಸರಿಯಲ್ಲವೆಂದು ಹೇಳಿದ್ದಾರೆ.

ಹಿಂದೆ ವಿದ್ಯಾಭ್ಯಾಸದಲ್ಲಿ ನಿರತರಾಗಿದ್ದವರ ಗುರಿ ಬೇರೆ ಇತ್ತು. ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದೇ ಅವರ ಗುರಿಯಾಗಿತ್ತು. ಈಗ ಆ ಭಾವನೆ ತಪ್ಪಿಹೋಗಿ ಸ್ಕೂಲುಗಳ ಮುಖ್ಯವಾದ ಗುರಿ, ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದೇ ಅಲ್ಲ, ಅವರು ಮುಂದೆ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವುದಕ್ಕೆ, ಬೇಕಾದ ಕನುಬನ್ನು ಕಲಿಸಿಕೊಡುವುದಕ್ಕೆ ಯೋಗ್ಯರಾದ ನಾಗರಿಕರಾಗುವ ಹಾಗೆ ಮಾಡುವುದಕ್ಕೆ ತಕ್ಕ ಶಿಕ್ಷಣ ಕೊಡಬೇಕೆಂಬುದೇ ಆಗಿದೆ. ಆದುದರಿಂದ ಈ ಗುರಿಯನ್ನು ಮುಖ್ಯವಾಗಿಟ್ಟುಕೊಂಡು ನಮ್ಮ ದೇಶದಲ್ಲಿ ಅನೇಕ ಸಮಿತಿಗಳೂ ಆನೇಕ ಕಮಿಷ್ಟಿಗಳೂ ಈ ಅಂಶವನ್ನು ವಿಚಾರ ಮಾಡಿದ್ದಾರೆ. ಅನೇಕ ವರ್ಷಗಳ ಹಿಂದೆ, ಎಂದರೆ ಸುಮಾರು ಏಳೆಂಟು ವರ್ಷಗಳಲ್ಲಿ ಇಂಡಿಯಾ ಸರ್ಕಾರದವರು ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದರು. ಅದರಲ್ಲಿ ಅತಿರಥರು ಮಹಾ ರಥರು ಎನ್ನುವ ಹಾಗೆ ಅನೇಕ ಪಂಡಿತರೂ ಅನುಭವಿಗಳೂ ಇದ್ದರು. ಅವರು ಈ ವಿಚಾರಗಳನ್ನೆಲ್ಲಾ ಪರಿಶೀಲನೆಮಾಡಿ, ಅನೇಕ ತೀರ್ಮಾನಗಳಿಗೆ ಬಂದಿದ್ದಾರೆ. ಮುಖ್ಯವಾಗಿ ಅವರು ಹೇಳಿರತಕ್ಕ ಮೂರು ನಾಲ್ಕು ಮಾತುಗಳನ್ನು ಜ್ಞಾಪಕದಲ್ಲಿಡಬೇಕು. ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಮೂಲ ಅಥವ ಅಡಿಪಾಯ ಬದಲಾವಣೆಯಾಗಬೇಕು. ಇದಕ್ಕೆ ನಮ್ಮ ಸಂಸ್ಥಾನದಲ್ಲಿರತಕ್ಕ ದೊಡ್ಡ ಅಡಚಣೆಯಾವುದೆಂದರೆ, ಮಿಡ್ಲ್ ಸ್ಕೂಲ್ ಪರೀಕ್ಷೆ. ಇದನ್ನು ವಜಾ ಮಾಡುವುದಕ್ಕೆ ನಮ್ಮ ಮನಸ್ಸನ್ನು ವಿಶಾಲವಾಗಬೇಕು. ಮಿಡ್ಲ್ ಸ್ಕೂಲು ಪರೀಕ್ಷೆಗೆ ತಯಾರು ಮಾಡುವುದಕ್ಕೆ ನಾವು ಯಾವ ಪಾಠಪದ್ಧತಿ ಇದುವರೆಗೆ ಇಟ್ಟುಕೊಂಡಿದ್ದೇವೋ ಅದು ನಮ್ಮ ಕಣ್ಣು ಮುಂದಿರುತ್ತದೆ. ನಾವು ಮಿಡ್ಲ್ ಸ್ಕೂಲು ಪರೀಕ್ಷೆಯನ್ನು ವಜಾ ಮಾಡಿದರೆ, ಅಡಿಪಾಯದಲ್ಲಿರತಕ್ಕ ಒಂದು ಮುಖ್ಯ ಅಡಚಣೆಯನ್ನು ತೆಗೆದು ಹಾಕಿದ ಹಾಗಾಗುತ್ತದೆ.

ಅನೇಕ ವರ್ಷಗಳಿಂದಲೂ ಮೂಲ ಶಿಕ್ಷಣವನ್ನು ಜಾರಿಗೆ ತರಬೇಕೆಂದು ಎಷ್ಟು ಪ್ರಚಾರ ಮಾಡಿದರೂ ಕೂಡ ಮಿಡ್ಲ್ ಸ್ಕೂಲ್ ಪರೀಕ್ಷೆ ಇರುವುದರಿಂದ ಅದಕ್ಕೆ ದೊಡ್ಡ ಅಡಚಣೆಯಾಗಿದೆ. ರೂಢಮೂಲವಾಗಿ ಅಡಿಪಾಯದಿಂದ ಯಾವ ರೀತಿ 12 ವರ್ಷದ ಹುಡುಗರಿಗೆ ಶಿಕ್ಷಣ ಕೊಡಬೇಕೋ. ಆ ದೃಷ್ಟಿಯಿಂದ ಮಿಡ್ಲ್ ಸ್ಕೂಲು ಪರೀಕ್ಷೆಯನ್ನು ವಜಾಮಾಡಬೇಕು.

ಆ ಸಮಿತಿಯವರು ಇನ್ನೊಂದು ತೀರ್ಮಾನಕ್ಕೆ ಬಂದಿದ್ದಾರೆ. ಮಹಾತ್ಮಾ ಗಾಂಧಿಯವರೂ ಅವರ ಶಿಷ್ಯರೂ ಹೇಳಿರುವ ಬೇಸಿಕ್ ಎಜ್ಯುಕೇಷನ್, ಅಂದರೆ, ಮೂಲ ಶಿಕ್ಷಣ ಪದ್ಧತಿಯನ್ನು ಒಪ್ಪಿಕೊಂಡು ವಿದ್ಯಾಭ್ಯಾಸದಲ್ಲಿರತಕ್ಕ ಸುಧಾರಣೆಗಳನ್ನು ಸೂಚಿಸಿದ್ದಾರೆ. ಇದರಲ್ಲಿ ಪರೀಕ್ಷೆಗಳ ವಿಚಾರವನ್ನು ಹೀಗೆ ಹೇಳಿದ್ದಾರೆ:

Report of the Central Advisory Board of Education:

> "No external examination need be held at the end of the basic school course. A leaving certificate on the basis of internal examination should be given."

(ಶ್ರೀ ಪಿ. ಆರ್. ರಾಮಯ್ಯನವರು)

ತಜ್ಞರಾಗಿರತಕ್ಕವರು ಹೇಳಿರುವ ಅಭಿಪ್ರಾಯವನ್ನು ನಾವು ಒಪ್ಪಬೇಕು. ಪಬ್ಲಿಕ್ ಪರೀಕ್ಷೆಗಳಲ್ಲಿ ಸಾಧಕಗಳಿಗಿಂತ ಬಾಧಕಗಳು ಹೆಚ್ಚಾಗಿರುವಾಗ ತಜ್ಞರು ಹೇಳಿರುವ ಹಾಗೆ, ಸ್ಕೂಲುಗಳಲ್ಲೇ ಪರೀಕ್ಷೆ ಮಾಡಿ, ವಿದ್ಯಾರ್ಥಿ ಯಾವ ರೀತಿ ವಿದ್ಯಾಭ್ಯಾಸ ಹೊಂದುತ್ತಿದ್ದಾನೆ, ಅವನ ಉತ್ತರಗಳು ಹೇಗಿವೆ ಎಂಬುದನ್ನು ತಿಳಿದು ಅವನ ಶ್ರೇಯೋಭಿವೃದ್ಧಿಯಾಗುವ ಹಾಗೆ ಅವಕಾಶ ಮಾಡಬೇಕು. ಎಲ್ಲ ದೃಷ್ಟಿಯಿಂದಲೂ, ಈಗಿನ ವಿದ್ಯಾಭ್ಯಾಸ ಸುಧಾರಣಾ ದೃಷ್ಟಿಯಿಂದಲೂ ಮೊಟ್ಟಮೊದಲು ಮಿಡ್ಲ್ ಸ್ಕೂಲ್ ಪರೀಕ್ಷೆಯನ್ನು ವಜಾ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ ಅವರು (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈಗ ಮಾಧ್ಯಮಿಕ ಪಾಠಶಾಲೆಯ ಪರೀಕ್ಷೆಯನ್ನು ವಜಾ ಮಾಡಬೇಕೆಂದು ನಮ್ಮ ಮಾನ್ಯ ಸದಸ್ಯರೊಬ್ಬರು ಈ ನಿರ್ಣಯವನ್ನು ತಂದಿದ್ದಾರೆ.....

ಶ್ರೀ ಎಸ್. ಕರಿಯಪ್ಪನವರು.—ಮಾಧ್ಯಮಿಕ ಪರೀಕ್ಷೆಗಳನ್ನು ವಜಾ ಮಾಡಬೇಕೆಂದಲ್ಲ, ಮಿಡ್ಲ್ ಸ್ಕೂಲು ಪಬ್ಲಿಕ್ ಪರೀಕ್ಷೆಯನ್ನು ವಜಾ ಮಾಡಬೇಕೆಂದು ಇದರಲ್ಲಿ ಸೂಚಿಸಿದೆ.

ಶ್ರೀ ಬಿ. ಟಿ. ಕೆಂಪರಾಜ್ ಅವರು.—It is proposed in this Resolution that the Middle School Examination should be abolished.

(ಕೆಲವು ಸದಸ್ಯರು ಕನ್ನಡದಲ್ಲೇ ಮಾತನಾಡಬೇಕೆಂದು ಸೂಚಿಸಿದರು).

ಸ್ವಾಮಿ, ಈ ಪರೀಕ್ಷೆಯನ್ನು ತೆಗೆದುಹಾಕಬೇಕೆಂದು ಅನೇಕ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ತೆಗೆಯುವುದು ದೇಶದ ಹಿತದೃಷ್ಟಿಯಿಂದ, ಕಾಲದ ದೃಷ್ಟಿಯಿಂದ ಸಮಂಜಸವಾಗಿದೆಯೆ ಎಂಬುದು ಬಹು ಮುಖ್ಯವಾದ ವಿಷಯ. ಈಗಾಗಲೇ ನಮ್ಮ ಮಾನ್ಯ ಮುಖ್ಯ ಸಚಿವರು ಮೈಸೂರು ಸಂಸ್ಥಾನದ ಪ್ರಜೆಗಳ ಮುಂದೆ, ಈ ಶಾಸನಸಭಾನದಸ್ಯರ ಮುಂದೆ ಆರ್ಥಿಕ ಬಡ್ಜೆಟ್ಟನ್ನು ಮಂಡಿಸಿದ್ದಾರೆ. ಅದರಲ್ಲಿರತಕ್ಕ ಖೋತಾವನ್ನು ಸರಿದೂಗಿಸಿ, ಈ ಬಡ್ಜೆಟ್ಟನ್ನು ಸರಿಯಾಗಿ ಕಟ್ಟಬೇಕಾದರೆ, ಯಾವ ಯಾವ ವಿಚಾರಗಳನ್ನು ನಾವು ಗಮನಿಸಬೇಕಾಗಿದೆ ಎಂಬ ವಿಚಾರವೂ ನಮ್ಮ ಮುಂದಿದೆ. ಇಂತಹ ಒಂದು ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಮಾಧ್ಯಮಿಕ ಶಾಲಾ ಸರ್ಕಾರದ ಪರೀಕ್ಷೆಯನ್ನು ವಜಾ ಮಾಡುವುದರಿಂದ ಸರ್ಕಾರಕ್ಕೆ ಬರತಕ್ಕ ಆದಾಯದಲ್ಲಿ ಎಷ್ಟರಮಟ್ಟಿಗೆ ಖೋತಾ ಬೀಳುತ್ತದೆ ಎಂಬುದನ್ನು ನಾವು ಯೋಚಿಸಬೇಕಾಗುತ್ತದೆ. ಇದೂ ಅಲ್ಲದೆ ಒಂದೇ ಬಾರಿಗೆ ಈ ಪರೀಕ್ಷೆಯನ್ನು ತೆಗೆಯಲು ಸಾಧ್ಯವಾಗುವುದಿಲ್ಲ. ಏಕೆಂದರೆ ಈ ಪರೀಕ್ಷೆ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಟ್ಟು ಕಳುಹಿಸುವ ಪದ್ಧತಿ ನೂರಾರು ವರ್ಷಗಳಿಂದಲೂ ಜಾರಿಗೆ ಬಂದಿದೆ. ಈಗ ಒಂದೇ ಬಾರಿಗೆ 952—53ನೆಯ ಸಾಲಿಗೇ ಈ ಪರೀಕ್ಷೆಯನ್ನು ತೆಗೆಯುವುದಾದರೆ, ವಿಪರೀತವಾದ ಒಂದು ಬದಲಾವಣೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಉಂಟುಮಾಡಿದ ಹಾಗಾಗುತ್ತದೆ. ಈ ವಿಪರೀತ ಬದಲಾವಣೆ ಏನೆಂದರೆ ಮಾಧ್ಯಮಿಕ ಸರ್ಕಾರದ ಪರೀಕ್ಷೆಗೆ ಓದಬೇಕಾದ ಕೆಲವು ಪಾಠಗಳಿವೆ, ಅವುಗಳನ್ನು ಅನುಸರಿಸಿ ಮಾಧ್ಯಮಿಕ ಶಾಲೆಯ ಉಪಾಧ್ಯಾಯರು ಮೊದಲನೆಯ ವರ್ಷದಿಂದಲೂ ಪಾಠ ಹೇಳಿಕೊಂಡು ಬರುತ್ತಾರೆ. ಒಂದೇ ಬಾರಿಗೆ ಈ ಪರೀಕ್ಷೆಯನ್ನು ವಜಾ ಮಾಡುವುದಾದರೆ, ಪಾಠದ ಕ್ರಮವನ್ನೇ ಬದಲಾಯಿಸಬೇಕಾಗುತ್ತದೆ. ಈ ರೀತಿ ಪಾಠದ ಕ್ರಮವನ್ನೇ ಬದಲಾಯಿಸಬೇಕಾದರೆ, ನಾಲ್ಕು ವರ್ಷಗಳ ಅವಧಿಯನ್ನಾದರೂ ತೆಗೆದುಕೊಂಡು ಈ ಪರೀಕ್ಷೆಯನ್ನು ತೆಗೆದುಹಾಕುವ ಯೋಜನೆಯನ್ನು ನಿರ್ಣಯಿಸಬೇಕಾಗುತ್ತದೆ. ಒಟ್ಟಿನಲ್ಲಿ, ಸರ್ಕಾರಕ್ಕೆ ಬರತಕ್ಕ ಉತ್ಪತ್ತಿ, ಎರಡನೆಯದು ಪಾಠಗಳನ್ನು ಈಗ ಹೇಳಿಕೊಡುತ್ತಿರುವ ಕ್ರಮದ ಬದಲಾವಣೆ—ಇವೆರಡನ್ನೂ ನಮ್ಮ ಗಮನದಲ್ಲಿಟ್ಟುಕೊಂಡು ಈ ಪರೀಕ್ಷೆಯನ್ನು ಇಟ್ಟುಕೊಳ್ಳಬೇಕೇ ಅಥವ ವಜಾ ಮಾಡಬೇಕೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಯಾವುದೇ ಒಂದು ಕಾನೂನನ್ನು ನಾವು ಮಾಡುವುದಕ್ಕೆ ಮೊದಲು ಅದರ ಸಾಧಕಬಾಧಕಗಳನ್ನು ಯೋಚನೆಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ಯರು (ಚಿ. ನರಸೀಪುರ).—ಸ್ವಾಮಿ, ಈ ಸಭೆಯ ಮುಂದೆ ಮಂಡಿತ ವಾಗಿರುವ ನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ಸೂಚನೆಗಳನ್ನು ಹೇಳಬಯಸುತ್ತೇನೆ. ಮಿಡ್ಲ್ ಸ್ಕೂಲ್ ಪರೀಕ್ಷೆಯನ್ನು ವಜಾ ಮಾಡುವುದು ಸರ್ವೋತ್ತಮ. ಆದರೆ ಇದರಲ್ಲಿ ನಾವು ಯೋಚನೆ ಮಾಡಬೇಕಾದ ಕೆಲವು ವಿಷಯಗಳಿವೆ. ಮಿಡ್ಲ್ ಸ್ಕೂಲು ನಾಲ್ಕನೇ ವರ್ಷದ ತರಗತಿಯಲ್ಲಿ ಈಗಾಗಲೇ ಸುಮಾರು 50 ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸುಮಾರು 40 ಸಾವಿರ ಜನರು ಈ ವರ್ಷ ಪರೀಕ್ಷೆಗೆ ಕುಳಿತಿದ್ದರು. ಇವರಲ್ಲಿ 16 ಸಾವಿರ ಜನ ಉತ್ತೀರ್ಣರಾಗಿದ್ದಾರೆ. ಇವರಿಗೆ ಹೈಸ್ಕೂಲು ಗಳಲ್ಲಿ ಸ್ಥಳ ಸಿಕ್ಕುವುದೇ ಕಷ್ಟವಾಗಿದೆ. ಹೀಗಿರುವಾಗ ಈ ಪರೀಕ್ಷೆಯನ್ನು ವಜಾ ಮಾಡಿದರೆ, ಈಗ ಓದತಕ್ಕ 50 ಸಾವಿರ ಹುಡುಗರಿಗೆ ಹೈಸ್ಕೂಲುಗಳಲ್ಲಿ ಸ್ಥಳಾವಕಾಶ ಮಾಡದೆ, ವಜಾ ಮಾಡಿದರೆ ಆಮೇಲೆ ಏನು ಮಾಡುವುದು ?

ಶ್ರೀ ಪಿ. ವೆಂಕಟಪ್ಪನವರು.—ನಿರ್ಣಯವನ್ನು ಅನುಮೋದಿಸುತ್ತೇನೆಂದು ಹೇಳಿದರಲ್ಲಾ ?

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ಯರು.—ಅನುಮೋದಿಸುತ್ತೇನೆ, ಆದರೆ ಇದರ ಆಗು ಹೋಗು ಏನಿದೆ ಎಂಬುದನ್ನು ಹೇಳುತ್ತಿದ್ದೇನೆ. ಸುಮ್ಮನೆ ಕೈ ಎತ್ತುವುದಕ್ಕೆ ಬದಲಾಗಿ ಎಲ್ಲ ದೃಷ್ಟಿಯಿಂದಲೂ ಯೋಚನೆ ಮಾಡಬೇಕು; ಯಾವುದೊಂದು ನಿರ್ಣಯಕ್ಕೆ ಬೆಂಬಲ ಕೊಡಬೇಕಾದರೂ, ಅದನ್ನು ಕಾರ್ಯರೂಪಕ್ಕೆ ತಂದರೆ ಎಷ್ಟುಮಟ್ಟಿನ ಫಲತಾಂಶವಾಗಬಹುದು ಎಂಬುದನ್ನು ಯೋಚಿಸಬೇಕು. ನಾವು ನಮ್ಮ ನಮ್ಮ ಊರುಗಳಿಗೆ ಹೋದಮೇಲೆ ಈ ಪರೀಕ್ಷೆಯನ್ನು ತೆಗೆದು ಹಾಕಿಸಿದ್ದೇವೆಂದರೆ, ಅವರು ಮುಂದೆ ಏನು ಏರ್ಪಾಡು ಮಾಡಬೇಕೆಂಬ ಸಲಹೆಯನ್ನೂ ಕೊಡಬೇಕು. ಪ್ರತಿನಿಧಿಗಳಾಗಿ ನಾವು ಅವರಿಗೆ ಮಾರ್ಗದರ್ಶಕರಾಗಿರಬೇಕು. ನಾವು ಏನೊಂದು ನಿರ್ಣಯಕ್ಕೆ ಬಂದಿದ್ದೇವೋ ಅದನ್ನು ಹೇಗೆ ಕಾರ್ಯ ರೂಪಕ್ಕೆ ತರುವುದೆಂಬುದನ್ನು ಚರ್ಚೆ ಮಾಡಿ ಎಲ್ಲರ ಅಭಿಪ್ರಾಯವನ್ನೂ ಪಡೆದರೆ ನಿಜವಾಗಿ ಸಂಸ್ಥಾನದಲ್ಲಿ ಎಲ್ಲ ಹುಡುಗರಿಗೂ ಅನುಕೂಲವಾಗುತ್ತದೆ. ವಿದ್ಯಾಭ್ಯಾಸ ಕ್ರಮವನ್ನು ಬದಲಾವಣೆ ಮಾಡುವುದಕ್ಕೆ ಒಂದು ಸಮಿತಿಯಾಗಬೇಕೆಂದು ಮಂತ್ರಿಗಳು ಹೇಳಿದರು. ಮೊದಲು ಇದನ್ನು ಇತ್ಯರ್ಥಪಡಿಸಿ, ಪರೀಕ್ಷೆಯನ್ನು ತಕ್ಷಣ ತೆಗೆದು ಹಾಕಿದರೆ ಏನು ಮಾಡಬೇಕು, ವಿದ್ಯಾರ್ಥಿಗಳಿಗೆ ಅನಾನುಕೂಲವಾಗುವುದಿಲ್ಲವೆ, ತೆಗೆದುಹಾಕಬೇಕಾ

ದರೂ ಯಾವ ರೀತಿ ತೆಗೆದುಹಾಕಬೇಕು ಎಂಬುದನ್ನು ತೀರ್ಮಾನ ಮಾಡಿ ನಂತರ ತೆಗೆದುಹಾಕುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಶಿವನಂಜೇಗೌಡರು (ಮೈಸೂರು ತಾಲ್ಲೂಕು).—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀ ಎಸ್. ಕರಿಯಪ್ಪನವರು ತಂದಿರತಕ್ಕ ನಿರ್ಣಯವನ್ನು ನಾನು ಅನುಮೋದಿಸುತ್ತ ಒಂದೆರಡು ಮಾತುಗಳನ್ನು ಆಡಬೇಕೆಂಬ ಇಚ್ಛೆ ನನಗಿದೆ.

ಈಗ ಹಳ್ಳಿಗಾಡುಗಳಲ್ಲಿ ಮಿಡ್ಲ್ ಸ್ಕೂಲುಗಳಿರತಕ್ಕದ್ದೆ ಬಹಳ ಕಡಮೆ. ಈ ಮಿಡ್ಲ್ ಸ್ಕೂಲುಗಳೇನಿದ್ದರೂ ಈಗ ಕೇವಲ ದೊಡ್ಡ ದೊಡ್ಡ ಸಿಟಿಗಳಲ್ಲಿಯೂ ಪಟ್ಟಣಗಳಲ್ಲಿಯೂ ಇರುತ್ತವೆ. ಈ ತೊಂದರೆಯಿಂದ ಈಗ ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡತಕ್ಕ ಮಕ್ಕಳು ಕೇವಲ ಚಿಕ್ಕವಯಸ್ಸಿನವರಾಗಿದ್ದಾಗ್ಗೂ, 5–6 ಮೈಲಿಗಳಷ್ಟು ನಡೆದುಕೊಂಡು ಹೋಗಬೇಕಾಗಿದೆ. ಅಲ್ಲದೆ 10–15 ಮೈಲಿಗಳ ಫಾನಲೆಗೊಂದರಂತೆ ಇವುಗಳನ್ನು ಮಾಡಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡತಕ್ಕ ಹಳ್ಳಿಗಾಡಿನ ಜನರು ವಿದ್ಯಾವಂತರಾಗಲು ತುಂಬಾ ಕಷ್ಟವಿದೆ. ಹೀಗಾಗಿ ಅಂತೂ ಇಂತೂ ಹಳ್ಳಿ ಮಕ್ಕಳು ವಿದ್ಯಾವಂತರಾಗುವುದಕ್ಕೆ ಮಾರ್ಗವಿಲ್ಲದಂತಾಗಿದೆ. ಹಳ್ಳಿ ಜನರ ಮಕ್ಕಳು ವಿದ್ಯಾಭ್ಯಾಸದಲ್ಲಿ ಹಿಂದೆ ಬೀಳುತ್ತಿರುವುದನ್ನು ಚೆನ್ನಾಗಿ ಮನಗಂಡು, ಈ ಪರೀಕ್ಷೆ ಇಟ್ಟಿರುವುದರಿಂದ ಹುಡುಗರಿಗೆ ಎಳ್ಳಷ್ಟೂ ಪ್ರಯೋಜನ ವಿಲ್ಲವೆಂಬುದನ್ನು ಮನಗಂಡೇ ಶ್ರೀಮಾನ್ ಕರಿಯಪ್ಪನವರು ಈ ನಿರ್ಣಯವನ್ನು ತಂದಿದ್ದಾರೆ. ಇದು ಬಹಳ ಒಳ್ಳೆಯದು, ಅನುಕೂಲವಾಗಿದೆ ಮತ್ತು ಸಾಧುವಾದದ್ದಾಗಿದೆ. ಈಗ ನಾವು ಇಂಥಾ ಒಂದು ಪರೀಕ್ಷೆಯನ್ನಿಟ್ಟಿರುವುದರಿಂದ ಹುಡುಗರಿಗೊಂದು ಭ್ರಾಂತಿ ಹಿಡಿಸಲು ಅನುಕೂಲವೇ ಹೊರತು ಕಾರ್ಯತಃ ಇದರಿಂದೇನೂ ಅವರಿಗೆ ಉಪಯೋಗವಾಗುತ್ತಿಲ್ಲ. ಈ ಹುಡುಗರ ತಂದೆ ತಾಯಿಗಳಾದರೋ ಕೇವಲ ವಿದ್ಯದ ಗಂಧವೇ ನೆಂಬುದನ್ನು ಕೂಡ ಅರಿಯದವರು. ಮೊನ್ನೆ ಒಂದು ವಿಚಾರ ನಮ್ಮ ಕಡೆ ನಡೆಯಿತು. ಏನೆಂದರೆ ಇನ್ನು ಪರೀಕ್ಷೆಗೆ ಕುಳಿತುಕೊಳ್ಳಲು ಕೊಡತಕ್ಕ ಹಾಲ್ಟಿಕೆಟ್‌ಗಳು ಬರುವುದು ಹದಿನೈದು ದಿವಸಗಳಿರುತ್ತವೆನ್ನುವಾಗ ನಮ್ಮ ಊರಿನಲ್ಲಿ ಈ ಪರೀಕ್ಷೆಗೆ ಕಟ್ಟಿದ್ದ 12 ಹುಡುಗರೂ, ಅವರವರ ತಂದೆತಾಯಿಗಳನ್ನು ಪೀಡಿಸಿ ಇತರೇ ಹಳ್ಳಿಗಳಿಂದ, ಯಾರೋ ಪರೀಕ್ಷೆಗೆ ಬರತಕ್ಕಂಥ ಪ್ರಶ್ನೆಪತ್ರಿಕೆಗಳನ್ನೆಲ್ಲಾ ಬರೆದುಕೊಂಡು ತಂದಿವ್ವಾರೆ, ಅದಕ್ಕಾಗಿ ಅವರಿಗೆ ದುಡ್ಡುಕೊಟ್ಟರೆ ಅವರು ಅವುಗಳನ್ನು ಹೇಳ್ತಾರಂತೆ ಎಂದು ಒಬ್ಬರು, 20 ರೂಪಾಯಿಗಳನ್ನೂ ಇನ್ನೊಬ್ಬರು 30 ರೂಪಾಯಿಗಳನ್ನೂ, ಮತ್ತೊಬ್ಬರು 50 ರೂಪಾಯಿಗಳನ್ನೂ ಹೀಗೆ ಎಲ್ಲರೂ ದುಡ್ಡುಕೊಟ್ಟು ಆ ಪ್ರಶ್ನೆಗಳನ್ನು ತಿಳಿದುಕೊಂಡು ಪರೀಕ್ಷೆಗೆ ಹೋಗಿ ಕುಳಿತರು. ಆದರೆ ಹಾಗೆ ದುಡ್ಡನ್ನು ಕಳೆದುಕೊಂಡ 12 ಹುಡುಗರ ಪೈಕಿ ಒಬ್ಬನೂ ತೇರ್ಗಡೆಯಾಗಲಿಲ್ಲ. ಪರೀಕ್ಷೆಗೆ ಇದು ಬರುತ್ತದೆ, ಅದು ಬರುತ್ತದೆಂದು ಹೇಳಿ ಯಾವನೋ ಒಬ್ಬನು 20, 30, 50 ರೂಪಾಯಿಗಳನ್ನು ಅವರವರ ಶಕ್ತ್ಯಾನುಸಾರ ಕಿತ್ತುಕೊಂಡು ಹೋಗಿಬಿಟ್ಟ. ಆಗ ನಾನು ಆ ಹುಡುಗರನ್ನು ಕೇಳಿದೆ—"ನಿಮಗೆ ತಂದು ಆತ ತೋರಿಸಿದ ಪ್ರಶ್ನೆ ಪತ್ರಿಕೆಗಳು, ಆಟ್ಟಾಗಿದ್ದವುಗಳೋ ಅಥವಾ ಕೈಲಿ ಬರೆದಿದ್ದವುಗಳೋ"—ಎಂದು. ಅದಕ್ಕೆ ಹುಡುಗರು ಅವುಗಳನ್ನು ಕೈಲಿ ಬರೆಯಲಾಗಿತ್ತೆಂದು ತಿಳಿಸಿದರು. ಅವರಿಗೆ ನಾನು ತಿಳಿಸಿದೆ, "ಹೋಗಿ, ಎಲ್ಲಾದರೂ ಅಷ್ಟು ಮಣ್ಣು ಹೊಯ್ದುಕೊಳ್ಳಿ" ಎಂದು. ಆದ್ದರಿಂದ ಈ ಪರೀಕ್ಷೆ ವಜಾಮಾಡಬೇಕೆಂದು ಕೋರುತ್ತೇನೆ.

ಈಗ ಇಂಥಾ ಪರೀಕ್ಷೆಗಳನ್ನಿಟ್ಟಿರುವುದರಿಂದ ಈ ರೀತಿಯಲ್ಲಿ ಜನರನ್ನು ಕೆಲವರು ಮೋಸಪಡಿಸಿರುತ್ತಾರೆ. ಇದರಿಂದ ಅನೇಕರಿಗೆ ಪೂರಾ ಮನಸ್ಸು ನೊಂದಿದೆ. ಶ್ರೀಮಾನ್ ಕರಿಯಪ್ಪನವರು ಈಗಿನ ಕಾಲದವರಲ್ಲ. ಅವರು ಬಹಳ ಹಳಬರು. ಅವರಿಗೆ ಈ ವಿಚಾರಗಳೆಲ್ಲವೂ ತಿಳಿದಿದೆ. ಅದೇ ರೀತಿ ಶ್ರೀಮಾನ್ ಬಿ. ಹುಚ್ಚೇಗೌಡರೂ ಸಹ ಬಹಳ ಅನುಭವಸ್ಥರು. ಆದರೆ ಈ ವಿಷಯಗಳಲ್ಲ ನಾನೇನೂ ಹೊಸಬ.

(ಸಭೆಯಲ್ಲಿ ಯಾರೋ ಒಬ್ಬರು ಒಂದು ಕ್ರಿಯಾರೋಪವನ್ನೆತ್ತಲು ಪ್ರಯತ್ನಪಡುತ್ತಿದ್ದರು.)

ಏನು ನಾನು 'ಹೊಸಬ' ಎಂಬ ಪದವನ್ನು ಪಯೋಗಿಸಿದ್ದೇ ತಪ್ಪೋ? ಹೊಸಬರಿಗೂ, ಹಳಬರಿಗೂ ಒಂದು ಔಚಿತ್ಯವಿದ್ದೇ ಇದೆ. ಅನುಭವಸ್ಥರನ್ನು ಅನುಭವಸ್ಥರೆಂದೇ ಹೇಳಬೇಕು. ಯಾರಾದರೇನು, ಗುಣಕ್ಕೆ ಮಾತ್ಸರ್ಯವಿಲ್ಲ. ಆದರೆ ಈ ವಿಚಾರಗಳಿಗೆಲ್ಲಾ ತಾವು ಯಾವ ಒಂದು ಸಮಿತಿಯನ್ನೂ ಏರ್ಪಾಡುಮಾಡಬೇಕಾಗಿಲ್ಲ. ಈಗಲೇ ಈ ನಿರ್ಣಯವನ್ನು ಅಂಗೀಕಾರ ಮಾಡಬೇಕೆಂದೂ, ಇದಕ್ಕೆ ಈ ಸಭೆಯವರೆಲ್ಲರೂ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದೂ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸಾಮಯ್ಯನವರು (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮಾನ್ ಎಸ್. ಕರಿಯಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನಾಡುತ್ತೇನೆ.

ಈಗಾಗಲೇ ಅನೇಕ ಮಾನ್ಯ ಸದಸ್ಯರು ಸೂಚಿಸಿರುವಂತೆ ಮಿಡ್ಲ್‌ಸ್ಕೂಲು ಪರೀಕ್ಷೆಯನ್ನು ವಜಾಮಾಡುವ ಪಕ್ಷಕ್ಕೆ ಈಗ ನಡೆಯುತ್ತಿರುವ ಪಾಠಕ್ರಮವನ್ನೇ ಬದಲಾಯಿಸಬೇಕಾಗುತ್ತದೆ. ಈ ಮಿಡ್ಲ್‌ಸ್ಕೂಲು ಪರೀಕ್ಷೆ ನಡೆಯುವುದು 8 ವರ್ಷಗಳು ಓದಿದನಂತರ. ಇದಕ್ಕಾಗಿ ಹುಡುಗರನ್ನು ಯಾವುದೋ ಒಂದು ಗೊತ್ತಾದ ಕ್ರಮದಲ್ಲಿ ಈಗ ತಯಾರುಮಾಡುತ್ತಿದ್ದಾರೆ. ಹೀಗಿರುವಾಗ ಈ ಪರೀಕ್ಷೆಯನ್ನು ಥಟ್ಟನೆ ತೆಗೆದುಹಾಕಿಬಿಟ್ಟರೆ ಮಿಡ್ಲ್‌ಸ್ಕೂಲು ಮೂರನೆಯ ವರ್ಷದ ತರಗತಿಯಲ್ಲಿ ಓದುತ್ತಿರುವ ಹುಡುಗರ ಗತಿಯೇನಾಗಬೇಕು? ಈಗ ನಾವು ಯಾವುದೋ ಒಂದು ಕ್ರಮವನ್ನಿಟ್ಟುಕೊಂಡು ಹುಡುಗರನ್ನು ತಯಾರುಮಾಡುತ್ತಿದ್ದೇವೆ. ಅದರ ಪ್ರಕಾರ ಈಗ ಅವರು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು ಎಂದು ಇದೆ. ಆದಕಾರಣ ಇದನ್ನು ಥಟ್ಟನೆ ತೆಗೆದುಹಾಕುವುದಕ್ಕಾಗುವುದಿಲ್ಲ.

ಈ ದಿವಸ ಫ್ರೈಮರಿ ಒಂದನೇ ವರ್ಷದ ತರಗತಿಗೆ ಹೋಗುತ್ತಿರುವ ಹುಡುಗರನ್ನು ನಾವು ನೋಡಿದ್ದೇವೆ. ಆ ಹುಡುಗರಿಗೂ ಸಹ, ನಮಗಿರುವಂತೆ, ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬ ಒಂದು ಉಮೇದಿದೆ. ಅದನ್ನು ಇಟ್ಟುಕೊಂಡು ಅವರು ಕೆಲಸಮಾಡುತ್ತಿದ್ದಾರೆ. ಸುಮಾರು ಹೀಗೆ 7 ವರ್ಷ ಕಾಲ ವ್ಯಾಸಂಗಮಾಡಿದನಂತರ ಅವರು ಈ ಪಬ್ಲಿಕ್ ಪರೀಕ್ಷೆಗೆ ಕುಳಿತು ಇದರಲ್ಲಿ ಉತ್ತೀರ್ಣರಾಗಬೇಕಾಗಿದೆ. ಹೀಗೆ ಈವತ್ತು ಒಂದು ಗೊತ್ತಾದ ಕ್ರಮದಲ್ಲಿ ಪಾಠಮಾಡಿ ಅವರನ್ನು ವಿದ್ಯಾವಂತರಾಗುವಂತೆ ಮಾಡುತ್ತಿರುವುದನ್ನು ತಪ್ಪಿಸಿ, ಮತ್ತೆ ಯಾವುದೋ ಒಂದು ಕ್ರಮವನ್ನು ಜಾರಿಗೆ ತರುವುದರಿಂದ ಇದು ಕೇವಲ ಹುಡುಗರಿಗೆ ನಿರಾಸೆ ಉಂಟುಮಾಡಿದಂತಾಗುವುದಲ್ಲದೆ, ಆ ಹುಡುಗರ ತಂದೆ ತಾಯಿಗಳಿಗೂ ಒಂದು ನಿರಾಸೆಯನ್ನುಂಟುಮಾಡಿದಂತಾಗುತ್ತದೆ. ಹೀಗೊಂದು ನಿರಾಸೆಯನ್ನುಂಟುಮಾಡುವುದು

(ಶ್ರೀ ಆರ್. ಮುನಿಸಾಮಯ್ಯನವರು).

ಖಂಡಿತ ಸಾಧುವಾದ್ದಲ್ಲ. ಅಲ್ಲದೆ ಎಲ್ಲರಿಗೂ ಪಾಠಶಾಲೆಗಳಲ್ಲೇ ಓದಿ ತಮ್ಮ ಪ್ರತಿಭೆಯನ್ನು ತೋರಿಸುವುದಕ್ಕೆ ಅವಕಾಶವಿಲ್ಲ. ಎಷ್ಟೋ ಜನರು ಪಾಠಶಾಲೆಗೇ ಸೇರದೆ ತಮ್ಮ ತಮ್ಮ ಮನೆಗಳಲ್ಲೇ ವ್ಯಾಸಂಗಮಾಡಿ, ಈಮಿಡ್ಲ್ ಸ್ಕೂಲು ಪರೀಕ್ಷೆಗೆ ಕುಳಿತು, ಇದರಲ್ಲಿ ತೇರ್ಗಡೆಯಾಗಿ, ಹೈಸ್ಕೂಲು ವ್ಯಾಸಂಗಕ್ಕೆ ಹೋಗುವಂಥ ಒಂದು ಅವಕಾಶ ಸಹ ಈ ಪರೀಕ್ಷೆಯಲ್ಲಿ ಈ ದಿವಸ ಇದೆ. ಆದರೆ ಇಂದಿನ ಈ ಕ್ರಮವನ್ನು ಬದಲಾವಣೆ ಮಾಡಿದರೆ ಹೀಗೆ ಪ್ರೈವೇಟಿನಲ್ಲಿ ವ್ಯಾಸಂಗಮಾಡಿ ಹೈಸ್ಕೂಲಿಗೆ ಸೇರುವಂಥ ಅವಕಾಶ ತಪ್ಪಿಹೋಗುತ್ತದೆ. ಇಂದಿನ ಪರೀಕ್ಷಾ ಪದ್ಧತಿಯ ವಿದ್ಯಾಭ್ಯಾಸ ಕ್ರಮ ಅನೇಕ ಹೆಣ್ಣುಮಕ್ಕಳಿಗೆ ಬಹಳ ಅನುಕೂಲವಾಗಿದೆ. ಅದೇ ರೀತಿ ಗಂಡಸರಿಗೂ ಸಹ ಅನುಕೂಲವಾಗಿದೆ. ಮಿಲ್‌ಗಳು, ಇತ್ಯಾದಿ ಕಾರ್ಖಾನೆಯಲ್ಲಿ ಕೆಲಸಮಾಡತಕ್ಕವರು ತಮ್ಮ ವಿರಾಮಕಾಲದಲ್ಲಿ ಮನೆಯಲ್ಲೇ ಓದಿಕೊಂಡು ಪಾಠಶಾಲೆಗೆ ಸೇರದೆಯೇ ಈ ಪರೀಕ್ಷೆಗೆ ಕುಳಿತು ತೇರ್ಗಡೆಯಾಗುವಂಥ ಒಂದು ಅನುಕೂಲ ಇದರಲ್ಲಿದೆ. ಆದುದರಿಂದ ಈ ಪರೀಕ್ಷೆಯನ್ನು ತೆಗೆದುಹಾಕುವುದು ಸರಿಯಲ್ಲ.

ಇನ್ನು ಕೆಲವರು ಪಠ್ಯಪುಸ್ತಕಗಳ ವಿಚಾರ ಹೇಳಿದರು, ನಿಜ. ಆದರೆ ಇಂದಿನ ಪಠ್ಯಪುಸ್ತಕಗಳೆಲ್ಲಾ ಈ ದಿವಸದ ಮಕ್ಕಳ ಯೋಗ್ಯತೆಗೆ ಅನುಸಾರವಾಗಿ ನಿಗದಿ ಮಾಡಲಾಗಿದೆ. ಆದರೆ ಶ್ರೀ ಪಿ.ಆರ್. ರಾಮಯ್ಯನವರೂ ಮತ್ತು ಶ್ರೀಮಾನ್ ಕರಿಯಪ್ಪನವರೂ ವ್ಯಾಸಂಗಮಾಡುತ್ತಿದ್ದ ಕಾಲದ ಪಠ್ಯಪುಸ್ತಕಗಳು ನಿಜವಾಗಿಯೂ ಕಠಿಣವಾಗಿದ್ದವು. ಅವು ಇಂದಿನ ಹುಡುಗರಿಗೆ ಬಹಳ ಕಠಿಣವಾದವುಗಳಾಗಿವೆ. ಆದರೆ ಈಗ ಮಿಡ್ಲ್‌ಸ್ಕೂಲು ವ್ಯಾಸಂಗ ಮಾಡಿನುವ ಹುಡುಗರ ವಯಸ್ಸು 12 ವರ್ಷ. ಆ ವಯಸ್ಸಿನವರು ಎಷ್ಟರಮಟ್ಟಿಗೆ ವಿಷಯಗಳನ್ನು ಗ್ರಹಿಸಬಹುದೋ ಮತ್ತು ಎಷ್ಟರಮಟ್ಟಿಗೆ ಅವರಿಗೆ ಪ್ರಾಸಂಚಿಕ ವಿಷಯಗಳನ್ನು ಗ್ರಹಿಸಲು ಶಕ್ತ ಇದೆಯೋ ಅಷ್ಟರ ಮಟ್ಟಿಗೆ ಆಲೋಚನೆ ಮಾಡಿ ಟೆಕ್ಸ್‌ಟ್ ಬುಕ್ ಕಮಿಟಿಯವರು ಪುಸ್ತಕಗಳನ್ನು ನಿಯಮಿಸಿದ್ದಾರೆ. ಇವು ಈಗಿನ ಕಾಲಕ್ಕೆ ಸರಿಯಾಗಿವೆ. ಆದರೆ ಈಗಿನ ಕಾಲದ ಪರೀಕ್ಷೆಗಳು ಬಹಳ ಕಷ್ಟವೆಂದು ನಾವು ಹೇಳಿಕೊಳ್ಳುವುದೇ ಹೊರತು, ಹುಡುಗರಿಗೇನೂ ಈ ಪರೀಕ್ಷೆಗಳು ಅಷ್ಟು ಕಷ್ಟವೆಂದು ಕಾಣುವುದಿಲ್ಲ.

3-30 P.M.

ನಿಜವಾಗಿಯೂ ಪರೀಕ್ಷೆ ಕಷ್ಟವಾಗಿ ಕಾಣುವುದಿಲ್ಲ' ಹುಡುಗರಿಗೇನೂ ತೊಂದರೆಯಿಲ್ಲ. ಹೇಗೆಂದರೆ ಎಂದೂ ಬೈಸಿಕಲ್‌ಹತ್ತದೆ ಒಂದು ದಿವಸ ಹತ್ತಿದರೆ ಬೀಳುತ್ತೀಯೆ, ಹೋಗಬೇಡ ಎಂದು ಹೇಳುತ್ತಾರೆ ; ಆದರೆ ಹುಡುಗರು ಅಭ್ಯಾಸಬಲದಿಂದ ಚಾತುರ್ಯದಿಂದ ಎಷ್ಟೋ ಸುಖವಾಗಿ ಅಸಾಧ್ಯ ಜನಸಂದಣಿಯಿರುವ ಕಡೆಯಲ್ಲೂ ಬೈಸಿಕಲ್ ಮೇಲೆ ಹೋಗುತ್ತಾರೆ. ಅವರಿಗೆ ಅದು ಕಷ್ಟವಾಗಿ ಕಾಣುವುದಿಲ್ಲ. ಅದರಲ್ಲಿ ಅವರು ಆಸಕ್ತಿಯುಳ್ಳವರಾಗಿರುತ್ತಾರೆ. ಅಲ್ಲದೆ, ಎಂದೂ ಬೈಸಿಕಲ್ ಹತ್ತದೇ ಇರುವ ಅಥವಾ ಹತ್ತಿ ಪೆಟ್ಟು ತಿಂದಿರುವ ಮನುಷ್ಯನಿಗೆ ಭಯ ಬರುವುದು ಸಹಜ. ಆದ್ದರಿಂದ ಹುಡುಗರಿಗೆ ಪರೀಕ್ಷೆಯಿಂದ ನಿರುತ್ಸಾಹಬರುತ್ತದೆ, ಕಷ್ಟವಾಗುತ್ತದೆ ಎಂದು ಹೇಳುವುದಕ್ಕೆ ಸಾಕಾದಷ್ಟು ಕಾರಣ ಕಂಡುಬರುವುದಿಲ್ಲ. ಆದಕಾರಣ ಈ ಪರೀಕ್ಷೆಯನ್ನು ತೆಗೆಯಕೂಡದು. ಸಭೆಯವರು ವಿರೋಧಿಸುವುದಕ್ಕೆ ಬೆಂಬಲ ಕೊಡಬೇಕು ಎಂದು ಕೋರುತ್ತೇನೆ.

Mr. SPEAKER.—The House will now rise for lunch. The discussion on this resolution will continue after the House reassembles.

The Assembly adjourned for Lunch at Two Minutes past Three of the Clock and reassembled at Thirty-five Minutes past Three of the Clock.

(Mr. Speaker in the Chair)

Mr. SPEAKER.—I think the resolution is sufficiently discussed. Sri S. Kariappa may reply now to the debate.

ಶ್ರೀ ಎಸ್. ಕರಿಯಪ್ಪನವರು.— ಸ್ಪೀಕರ್, ಈ ವಿಚಾರದಲ್ಲಿ ಮಾತನಾಡುತ್ತಾ ಹಲವು ಮಿತ್ರರು ಈ ಪರೀಕ್ಷೆ ತೆಗೆದುಬಿಟ್ಟರೆ ಮುಂದೆ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಅಡಚಣೆ ಉಂಟುಮಾಡಿದಂತಾಗುತ್ತದೆ, ಆದ್ದರಿಂದ ತೆಗೆಯುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆದರೆ ಪರೀಕ್ಷೆ ತೆಗೆದಮಾತ್ರಕ್ಕೇ ಹುಡುಗರ ಮುಂದಿನ ವಿದ್ಯಾಭ್ಯಾಸಕ್ಕೆ ಕುಂದಕವುಂಟಾಗುವಹಾಗಿಲ್ಲ. ದಾರಿಯು ಸುಗಮವಾಗುತ್ತದೆ. ಮುಖ್ಯವಾಗಿ ಪಬ್ಲಿಕ್ ಪರೀಕ್ಷೆ ಹೋದರೂ ಕ್ಲಾಸ್ ಪರೀಕ್ಷೆ ಇದ್ದೇ ಇರುತ್ತದೆ. ಹೈಸ್ಕೂಲು ತರಗತಿಗೆ ಹೋಗುವುದಕ್ಕೆ ಒಂದು ಸರ್ಟಿಫಿಕೇಟ್ ಪರೀಕ್ಷೆಯಾಗುತ್ತದೆ. ಅದಾದನಂತರ ಆತ ಹೈಸ್ಕೂಲ್ ತರಗತಿಗಳಿಗೆ ಹೋಗುತ್ತಾನೆ.

ಒಬ್ಬಿಬ್ಬರು ಮಾತನಾಡುತ್ತಾ ಮಿಡ್ಲ್‌ಸ್ಕೂಲು ಪರೀಕ್ಷೆಗೆ 41 ಸಾವಿರ ಹುಡುಗರು ಈ ಸಾರಿ ಕುಳಿತಿದ್ದರು, ಅಲ್ಲದೆ ಪರೀಕ್ಷೆಗೆ ಕೂಡುವುದಕ್ಕೆ ಅವಕಾಶ ಕೊಡದೆ ಇರುವವರು 10 ಸಾವಿರ ಮಂದಿ, ಅಂದರೆ ಪ್ರಥಮತಃ 50 ಸಾವಿರ ಹುಡುಗರು ಏಕ್‌ದಂ ಪರೀಕ್ಷೆಗೆ ಕುಳಿತು ಹೈಸ್ಕೂಲಿಗೆ ಹೋದರೆ ಅಲ್ಲಿ ಹೇಗೆ ಸ್ಥಾನಗಳನ್ನೊದಗಿಸುವುದು ಎಂದು ಶಂಕೆಪಟ್ಟರು. ಅದು ನಿರಾಧಾರವಾದುದು. ಸರ್ಟಿಫಿಕೇಟ್ ಪರೀಕ್ಷೆ ಇರುವುದರಿಂದ 51 ಸಾವಿರ ಹುಡುಗರೂ ಏಕ್‌ದಂ ಮೇಲಕ್ಕೆ ಹೋಗುವುದಿಲ್ಲ. ಆದ್ದರಿಂದ ಸ್ಥಳ ಸಂಕೋಚವುಂಟಾಗುತ್ತದೆ ಅಥವಾ ಯಾವುದೋ ವಿಧದಲ್ಲಿ ತೊಂದರೆಯುಂಟಾಗುತ್ತದೆ ಎಂದು ಹೇಳುವಹಾಗಿಲ್ಲ. ಕೆಲವು ಮಂದಿ ಸರ್ಟಿಫಿಕೇಟ್ ಪರೀಕ್ಷೆಯಲ್ಲೂ ಕೂಡ ನಿಲ್ಲಬೇಕಾಗಿ ಬರುತ್ತದೆ. ಮೊದಲೇ ಹೇಳಿದಂತೆ ಒಂದು ವಿಷಯವನ್ನು ಪುನಃ ಹೇಳುವುದಾದರೆ ಮಕ್ಕಳ ಮನಸ್ಸು ನಿರಾತಂಕವಾಗಿ ಕೆಲಸಮಾಡಿಕೊಂಡು ಹೋಗಬೇಕೆಂಬ ಅರಿವಿರುತ್ತದೆ. ಅಲ್ಲದೆ ಈ ಪರೀಕ್ಷೆಯೆಂಬ ಒಂದು ಹೆಡಂಭೂತ ಅವರ ಮುಂದೆ ನಿಂತು ಅಡ್ಡಿಯಾಗಬಾರದು. ಮಕ್ಕಳ ವಿದ್ಯಾಭ್ಯಾಸ ಸುಗುಮವಾಗಿ ಸಾಗಿದರೆ ಅವರು ಮುಂದೆ ದೊಡ್ಡವರಾದಮೇಲೆ ಒಂದು ಕಡೆಯಲ್ಲ ಅಲ್ಲದಿದ್ದರೆ ಮತ್ತೊಂದು ಕಡೆ ಹೋಗುವುದಕ್ಕೂ, ದೊಡ್ಡ ದೊಡ್ಡ ಪರೀಕ್ಷೆಗಳಿಗೆ ಕೂಡುವುದಕ್ಕೂ ಭಯಪಡುವುದಿಲ್ಲ. ಮಕ್ಕಳ ಮನಸ್ಸಿಗೆ ಚಿಕ್ಕವಯಸ್ಸಿನಲ್ಲೇ ಭಯವುಂಟಾಗುವುದಾದರೆ ಅವರು ಮುಂದೆ ಧೈರ್ಯದಿಂದ ಸಾಹಸಪಡಬೇಕಾದ ಕೆಲಸಗಳಿಗೆ ಕೈಹಾಕಲು ಹಿಂದೆಗೆಯಬೇಕಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಈ ಮಾಧ್ಯಮಿಕ ಪರೀ

ಕ್ಷೆಯನ್ನು, ಅಂದರೆ ಯಾವ ಮಿಡ್ಲ್ ಸ್ಕೂಲು ಪಬ್ಲಿಕ್ ಪರೀಕ್ಷೆಯೆದೆಯೋ ಅದನ್ನು, ತೆಗೆಯುವುದು ಸೂಕ್ತವಾಗಿದೆ. ಅದನ್ನು ತೆಗೆಯಬೇಕು ಎಂದು ನಮ್ರತೆಯಿಂದ ಬೇಡುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ನ್ಯಾಯಾಂಗ ಮತ್ತು ವಿದ್ಯಾಶಾಖೆಯ ಮಂತ್ರಿಗಳು).—ಈ ಪರೀಕ್ಷೆ ವಿಷಯದಲ್ಲಿ ದೀರ್ಘಕಾಲ ಸುಮಾರು 1-1½ ಗಂಟೆಯವರೆಗೆ ಮಾನ್ಯ ಮಿತ್ರರೆಲ್ಲಾ ಮಾತನಾಡಿದ್ದಾರೆ. ಜೊತೆಗೆ ವಿದ್ಯಾಭ್ಯಾಸದಲ್ಲೇ ಮುಳುಗಿರುವವರೂ, ಆದಕ್ಕಾಗಿಯೇ ತಮ್ಮ ಜೀವನವನ್ನು ವಿನಿಯೋಗಪಡಿಸಿಟ್ಟಿರುವವರೂ ಮೇಧಾವಿಗಳೂ ಆದ ಶ್ರೀ ಕರಿಯಪ್ಪನವರೂ ಮತ್ತು ಇತರ ಕೆಲವು ಅನುಭವಿಗಳಾದವರೂ ಮಾತನಾಡಿದ್ದಾರೆ. ಆದರೆ ಇಷ್ಟು ಚರ್ಚೆಯಾದರೂ ಕೂಡ ಈ ಠರಾವನ್ನು ನಾವು ಒಪ್ಪಿಕೊಳ್ಳುವುದು ಕಷ್ಟವಾಗಿರುವುದೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈಹೊತ್ತಿನ ದಿವಸ ಪರೀಕ್ಷೆ ವಿಷಯದಲ್ಲಿ ಚರ್ಚೆ ಮಾಡುವಾಗ ವಿದ್ಯಾಭ್ಯಾಸದ ಅಂಗಾಂಗಗಳನ್ನೆಲ್ಲಾ ಸ್ವಲ್ಪ ವಿಚಾರ ಮಾಡಿ ವಿಮರ್ಶೆ ಮಾಡಬೇಕು. ಸಾಮಾನ್ಯವಾಗಿ 8–10 ವರ್ಷದ ಹುಡುಗರು ಪರೀಕ್ಷೆಗೆ ಹೋಗುತ್ತಾರೆ, ಅವರ ಮನಸ್ಸಿಗೆ ಪರೀಕ್ಷೆ ಬಹಳ ಕುಂದಕ ಎಂಬ ವಾದ ಬಂದಿದೆ ನಿಜ. ಈ ಪರೀಕ್ಷೆಯನ್ನು ನಿಲ್ಲಿಸಿದರೂ ಈಗ ಮಿಡ್ಲ್ ಸ್ಕೂಲಿನಲ್ಲಿರುವ ಈ ಸಮಸ್ಯೆಯು ಪ್ರಾಯಶಃ ಹೈಸ್ಕೂಲಿನಲ್ಲಿ ಉತ್ಪನ್ನವಾಗುವಂತೆ ಆಗುತ್ತದೆ. ಇದಕ್ಕೆ ಪರಿಹಾರವೇನೆಂದರೆ: ಮಿಡ್ಲ್ ಸ್ಕೂಲು ಮತ್ತು ಹೈಸ್ಕೂಲುಗಳಿಗೆ ಯಾವ ವಯಸ್ಸಿನವರು ವಿದ್ಯಾಭ್ಯಾಸಕ್ಕೆ ಹೋಗಬೇಕು ಎಂಬುದನ್ನು ನಿರ್ಧರಿಸುವುದು. ಇದನ್ನು ವಿಮರ್ಶಮಾಡಿ ಈ ವಿಷಯದಲ್ಲಿ ಈಗಾಗಲೇ ಸೆಕೆಂಡರಿ ಎಜುಕೇಷನ್ ಬೋರ್ಡಿನವರು ಮಿಡ್ಲ್ ಸ್ಕೂಲು ಪರೀಕ್ಷೆಗೆ ಕುಳಿತುಕೊಳ್ಳಲು 12 ವರ್ಷಗಳಾಗಿರಬೇಕು ಮತ್ತು ಹೈಸ್ಕೂಲು ಪರೀಕ್ಷೆಗೆ ಕುಳಿತುಕೊಳ್ಳಲು 15 ವರ್ಷಗಳಾದರೂ ಆಗಿರಬೇಕು ಎಂದು ಒಮ್ಮತದಿಂದ ಶಿಫಾರ್ಸು ಮಾಡಿರುವುದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಆದ್ದರಿಂದ ವಿದ್ಯಾಭ್ಯಾಸದಲ್ಲಿ ಯಾವ ತೊಂದರೆ ಮತ್ತು ಯಾವ ಲೋಪ ಇದೆಯೋ ಆ ಲೋಪಗಳಿಗೆ ಔಷಧಿ ಪಡೆಯಬೇಕೇ ಹೊರತು ಪರೀಕ್ಷೆ ತೆಗೆದುಹಾಕುವುದರಿಂದ ಲೋಪ ಹೋಗುತ್ತದೆ ಎಂದರೆ ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಎರಡನೆಯದಾಗಿ, ಈಗಿರತಕ್ಕ ವಿದ್ಯಾಭ್ಯಾಸ ಕ್ರಮದಲ್ಲಿ ಸರಿಯಾಗಿ ಪಾಠ ನಡೆಯುತ್ತಿಲ್ಲ ಎಂಬ ವಾದ ಬಂದಿದೆ. ಪರೀಕ್ಷೆ ತೆಗೆದು ಹಾಕಿದರೆ ವಿದ್ಯಾಭ್ಯಾಸ ಚೆನ್ನಾಗಿ ಆಗುತ್ತದೆ ಎಂದು ಊಹಿಸುವುದೂ ಕಷ್ಟ. ಹಾಗೆ ಒಪ್ಪಿಕೊಳ್ಳುವುದಾದರೆ ಎಲ್ಲಾ ಪರೀಕ್ಷೆಗಳನ್ನೂ ತೆಗೆದುಹಾಕಬಹುದು ಎಂದು ವಾದ ಹೂಡಬೇಕಾಗುತ್ತದೆ. ಇನ್ನೊಂದು ವಾದ ಬಂತು. ಬೇಸಿಕ್ ಎಜ್ಯುಕೇಷನ್‌ಗೆ ಪರೀಕ್ಷೆ ಇಲ್ಲ, ಆದ್ದರಿಂದ ಇಲ್ಲಿ ಏಕೆ ಎಂದು. ಬೇಸಿಕ್ ಸಿಸ್ಟಂ ಪ್ರಕಾರ ವಿದ್ಯಾಭ್ಯಾಸ ನಮ್ಮ ದೇಶದಲ್ಲಿ ಬಂದಿದ್ದೇ ಆದರೆ ಸಂತೋಷಪಡಬಹುದು. ಈಗ ಪರೀಕ್ಷೆ ಎಂಬುದು ಹೇಗೆ ಅನಿವಾರ್ಯವಾಗಿದೆ, ಅದು ಯಾವ ರೀತಿ ನಮ್ಮ ದೇಶಕ್ಕೆ ಬಂತು, ಈವತ್ತಿನ ಪರಿಸ್ಥಿತಿ ಏನು ಎಂಬುದನ್ನು ಯೋಚಿಸಬೇಕು.

ಮೂರನೆಯದಾಗಿ ಮದರಾಸು, ಬೊಂಬಾಯಿ ಪ್ರಾಂತಗಳಲ್ಲಿ ಈ ಪರೀಕ್ಷೆ ಇಲ್ಲ ಎಂಬ ವಾದಕ್ಕೆ ಎರಡು ಮಾತು ಹೇಳಬೇಕಾಗಿದೆ. ಅಮೆರಿಕಾದಲ್ಲಿ ನನ್ನ ಸ್ನೇಹಿತರು ಒಬ್ಬರು ಇದ್ದಾರೆ. ಈಚೆಗೆ ಅವರಿಂದ ಒಂದು ಕಾಗದ ಬಂದಿವೆ. ಅಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಕೊಡುವ ಶಾಲೆಗಳಲ್ಲಿ ಯಾವ ತರಗತಿಯಲ್ಲೇ ಆಗಲಿ 20 ಜನ ಹುಡುಗರಿಗಿಂತ ಜಾಸ್ತಿ ಇರುವುದಿಲ್ಲ. ಅಷ್ಟೇ ಅಲ್ಲ, ಪಾಠ ಹೇಳಿ ಕೊಡುವವರು ಅತಿ ಉತ್ತಮವಾದ ಉಪಾಧ್ಯಾಯರು. ಇಲ್ಲಿ ಹೇಗೆ ಕಾಲೇಜುಗಳಿಗೆ ಫರ್ಸ್ಟ್ ಕ್ಲಾಸ್ ಬಿ.ಎಸ್.ಸಿ., ಎಂ.ಎಸ್.ಸಿ., ಆಗಿರುವವರನ್ನು ನೇಮಕ ಮಾಡುತ್ತೇವೆಯೋ ಹಾಗೆ ಅಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅಂತಹ ಉತ್ತಮ ಅರ್ಹತೆಯುಳ್ಳ ಉಪಾಧ್ಯಾಯರನ್ನು ನೇಮಕಮಾಡುತ್ತಾರೆ. ನಾವು ಏನುಮಾಡುತ್ತೇವೆ? ಎಂ. ಎಸ್. ಪರೀಕ್ಷೆ ಪಾಸ್ ಆಗಿದ್ದರೆ ಸಾಕು, ಉಪಾಧ್ಯಾಯರಾಗಿ ನೇಮಿಸುತ್ತೇವೆ. ನಮ್ಮ ದೇಶದ ಪರಿಸ್ಥಿತಿ ನೋಡಿಕೊಂಡು ನಾವು ಮಾಡಿದ್ದೇವೆ. ಮದರಾಸನ್ನು ತೆಗೆದುಕೊಂಡರೆ ಅಲ್ಲಿ ಪರಿಸ್ಥಿತಿ ಇದಕ್ಕಿಂತ ಉತ್ತಮವಾಗಿದೆ. ಸಾಮಾನ್ಯವಾಗಿ ಹೈಸ್ಕೂಲು ವಿದ್ಯಾಭ್ಯಾಸ ಮಾಡಿರತಕ್ಕವರನ್ನು ಪ್ರಾಥಮಿಕ ವಿದ್ಯಾಭ್ಯಾಸದ ಉಪಾಧ್ಯಾಯರಾಗಿ ನೇಮಕ ಮಾಡುತ್ತಾರೆ. ನಮ್ಮ ದೇಶದಲ್ಲಿ ಏಕೆ ಹಾಗೆ ಮಾಡಬಾರದು ಎಂಬುದು ಬೇರೆ ಪ್ರಶ್ನೆ. ಬೊಂಬಾಯಿ ಮತ್ತು ಮದರಾಸಿನಲ್ಲಿ ಈ ಪರೀಕ್ಷೆ ಇಲ್ಲದೇ ಇದ್ದರೂ ಸರ್ಕಾರಿ ನೌಕರಿಗಳಿಗೆ ಬೇರೆ ಪರೀಕ್ಷೆಗಳು ಇವೆ. ನಮ್ಮ ದೇಶದಲ್ಲಿ ಏನಾಗಿದೆ ಎಂದರೆ ಎಂ.ಎಸ್. ಪರೀಕ್ಷೆ ಸರ್ಕಾರಿ ನೌಕರಿಗೆ ಮತ್ತು ಇತರ ಕೆಲಸಗಳಿಗೆ ಒಂದು ಆಧಾರವಾಗಿದೆ. ಪರೀಕ್ಷೆಗಳಲ್ಲಿರತಕ್ಕ ಒಂದು ದೋಷ ಎಂದರೆ ಪರೀಕ್ಷೆಯನ್ನು ವಿದ್ಯಾಭ್ಯಾಸದ ಒರೆಗಲ್ಲಾಗಿ ಮಾಡಿಕೊಳ್ಳದೆ ಸರ್ಕಾರಿ ನೌಕರಿಗಳನ್ನು ಪಡೆಯುವುದಕ್ಕೆ ಸಾಧನವನ್ನಾಗಿ ಮಾಡಿಕೊಂಡಿರುವುದು. ಇದು ಒಂದು ಹೊರೆಯಾಗಿ ಪರಿಣಮಿಸಿದೆ. ಈ ವಿಷಯದಲ್ಲಿ ಡಾ॥ ರಾಧಾಕೃಷ್ಣನ್ ರವರ ವರದಿ ಸ್ಪಷ್ಟವಾಗಿದೆ. ಎಲ್ಲಿಯವರೆಗೆ ನಾವು ಎಂ.ಎಸ್. ಪರೀಕ್ಷೆಯನ್ನು ಒಂದು ಆಧಾರವನ್ನಾಗಿ ಇಟ್ಟುಕೊಂಡಿರುತ್ತೇವೆಯೋ ಅಲ್ಲಿಯವರೆಗೂ ಈ ಪರೀಕ್ಷೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಜನಗಳು ಪರೀಕ್ಷೆಯನ್ನು ಯಾವ ರೀತಿ ಭಾವಿಸುತ್ತಾರೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳಬೇಕಾದರೆ, ಹೆಣ್ಣು ಮಕ್ಕಳಿಗೆ ಈ ಪರೀಕ್ಷೆಯ ನಿರ್ಬಂಧವನ್ನು ತೆಗೆದುಹಾಕಲಾಗಿದೆ. ಅದು 1938 ರಲ್ಲಿ ಇರಬಹುದು. ಇಲ್ಲಿಯವರೆಗೂ ನೋಡಿದರೆ, ನನ್ನಲ್ಲಿ ಅಂಕಿ ಅಂಶ ಇದೆ. ಆ ತರಗತಿಯಲ್ಲಿ ವ್ಯಾಸಂಗವಾಡುವ ವಿದ್ಯಾರ್ಥಿನಿಯರ ಪೈಕಿ ಸುಮಾರು 2/3 ಭಾಗ ವಿದ್ಯಾರ್ಥಿನಿಯರು ಈ ಪರೀಕ್ಷೆಗೆ ಕುಳಿತಿದ್ದಾರೆ. ಕಡ್ಡಾಯವಾದದೇ ಇದ್ದರೂ ವಿದ್ಯಾರ್ಥಿನಿಯರು ಪರೀಕ್ಷೆಗೆ ಹೋಗುತ್ತಾ ಇರುವುದರಿಂದ ಏನು ಗೊತ್ತಾಗುತ್ತದೆ? ಈ ಪರೀಕ್ಷೆಗಳಿಂದ ಯಾರಿಗೂ ಹೆದರಿಕೆ ಉಂಟಾಗಿಲ್ಲ, ಬೇಸರವಾಗಿಲ್ಲವೆಂದು. ಆದರೂ ಆದರಲ್ಲಿರತಕ್ಕ ದೋಷಗಳನ್ನು ನಿವಾರಣೆ ಮಾಡಬೇಕು. ಪರೀಕ್ಷೆಗಳಲ್ಲಿ ಲೀಕೇಜ್ ಆಗುತ್ತಾ ಇದೆ, ಅದನ್ನು ನಿರಪಡಿಸಬೇಕು ಎಂದು ಹೇಳಿದರು. ನಿರಪಡಿಸಬೇಕು ನ್ಯಾಯ. ಆದರೆ ಪರೀಕ್ಷೆಯೇ ಬೇಡ ಎಂದರೆ ಕೆರೆ ಏರಿಗೆ ಒಡಕು, ತೂತು ಬಿದ್ದರೆ ಏರಿಯನ್ನೇ ತೆಗೆದು ಹಾಕಿ ಎಂದ ಹಾಗಾಗುತ್ತದೆ. ಅದಕ್ಕೆ ಬದಲಾಗಿ ಆ ಒಡಕನ್ನು ನಿರಪಡಿಸಬೇಕು. ಈಚೆಗೆ ಪರೀಕ್ಷೆಗಳಲ್ಲಿ ಅನೇಕ ವಿಧವಾದ ಲೀಕೇಜ್ ಆಗಿದೆ. ಇದನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುವುದಾದರೆ 1908–9 ರಲ್ಲಿ ಮದರಾಸಿನಲ್ಲಿ ಎರಡು ಸಲ ಪರೀಕ್ಷೆ ಮಾಡಿದ್ದಾರೆ. ಒಂದು ಸಲ ಲೀಕೇಜ್ ಆಯಿತು. ಬೊಂಬಾಯಿನಲ್ಲಿ ಪ್ರಶ್ನೆ ಪತ್ರಗಳನ್ನು ಅಚ್ಚುಹಾಕಿ ತರಿಸಿದರು. ಇದರಲ್ಲೂ ಒಡಕು ಬಂತು. ಪುನಃ ಲಂಡನ್‌ನಿಂದ ಪ್ರಶ್ನೆ ಪತ್ರಿಕೆ

(ಶ್ರೀ ಎ. ಜಿ. ರಾಮಚಂದ್ರರಾಯರು.)

ತರಿಸಿ ಪರೀಕ್ಷೆ ಮಾಡಿದರು. ಆದ್ದರಿಂದ ದೋಷ ಇರುವುದನ್ನು ಕಡ್ಡಾಯವಾಗಿ ನಿಲ್ಲಿಸಬೇಕಾದದ್ದು ನ್ಯಾಯ. ಆದರೆ ಆ ಕಾರಣದಿಂದ ಪರೀಕ್ಷೆಯನ್ನೇ ವಜಾ ಮಾಡುವುದು ಸೂಕ್ತವಲ್ಲ.

ಕೊನೆಯದಾಗಿ ಈ ಪರೀಕ್ಷೆ ನಿಲ್ಲಿಸಬೇಕೆಂದು ಹತ್ತಾರು ವರ್ಷಗಳಿಂದ ಹೇಳುತ್ತಾ ಬಂದಿರುವುದನ್ನು ತಜ್ಞರು ವಿಚಾರ ಮಾಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಎಸ್. ಸುಬ್ಬರಾಯರು ಈ ಪರೀಕ್ಷೆ ಖಂಡಿತವಾಗಿಯೂ ಇರಬೇಕೆಂದು ಹೇಳಿದ್ದಾರೆ. ಮೆಕಾಲ್‌ಫೈನ್‌ರವರು ಮೈಸೂರು ಸೀಮೆಯಲ್ಲಿ ಇದನ್ನು ಇಟ್ಟುಕೊಂಡಿರುವುದು ಬಹಳ ಸೂಕ್ತವಾಗಿದೆ ಎಂದು ಹೇಳಿದ್ದಾರೆ. ಇಪ್ಪೆಲ್ಲಕ್ಕಿಂತ ಹೆಚ್ಚಾಗಿ ಮೈಸೂರು ವಿದ್ಯಾಭ್ಯಾಸ ಕ್ರಮದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದ ಡಾ|| ಸಿ. ಆರ್. ರೆಡ್ಡಿಯವರು ಹೇಳಿರುವ ಹಾಗೆ, ಇದನ್ನು ಸರಿಪಡಿಸಬೇಕು ಮತ್ತು ಸರಿಯಾಗಿ ನಡೆಸಿಕೊಂಡು ಬರಬೇಕು. ಅಷ್ಟೇ ಹೊರತು ಪರೀಕ್ಷೆ ಹೋಗಬೇಕೆಂದು ಅವರೂ ಹೇಳಿಲ್ಲ. ಆದ್ದರಿಂದ ಈ ವಿಧವಾದ ಪರಿಸ್ಥಿತಿಯಲ್ಲಿ ನಾವು ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಮುಂದುವರಿಸಬೇಕಾಗಿದೆ. ಅಮೆರಿಕಾ ದೇಶದಂತೆ ಒಳ್ಳೆಯ, ಉತ್ತಮ ಗ್ರಾಜುಯೇಟ್‌ಗಳನ್ನು ಪ್ರಾಥಮಿಕ ತರಗತಿಗಳಿಗೆ ನೇಮಕ ಮಾಡಿ, ಅವರಿಂದ ಹುಡುಗರಿಗೆ ತರಪೇತು ಕೊಟ್ಟರೆ ನಮಗೆ ಅಗತಕ್ಕಷ್ಟು ಸಂತೋಷ ಇನ್ನಾರಿಗೂ ಆಗಲಾರದು ಎಂದು ಹೇಳುತ್ತೇನೆ.

ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ಯರು ಒಂದು ವಿಚಾರ ಹೇಳಿದರು. ಇಂಗ್ಲೆಂಡು ಮತ್ತು ಇತರ ದೇಶಗಳಲ್ಲಿ ಸಾಮಾನ್ಯವಾಗಿ ವಿದ್ಯಾಭ್ಯಾಸದ ಜವಾಬ್ದಾರಿ ಜನರ ಮೇಲೆ ಬಿದ್ದಿದೆ. ಅವೇ ನಮ್ಮ ದೇಶದಲ್ಲಿ ಚಿಕ್ಕ ಕರ್ ವಿದ್ಯಾಭ್ಯಾಸ, ಹೈಸ್ಕೂಲು ವಿದ್ಯಾಭ್ಯಾಸ, ಪ್ರೈಮರಿ ವಿದ್ಯಾಭ್ಯಾಸ ಎಲ್ಲವೂ ಸರ್ಕಾರದ ಮೇಲೆ ಬಿದ್ದಿದೆ. ಖಾಸಗಿ ಜನಗಳು ಮುಂದೆ ಬಂದು ಪ್ರೈವೇಟ್ ಸ್ಕೂಲುಗಳನ್ನು ಏರ್ಪಾಡು ಮಾಡಿ, ಉತ್ತಮ ಉಪಾಧ್ಯಾಯರನ್ನು ನೇಮಕಮಾಡಿಕೊಂಡು ವಿದ್ಯಾಭ್ಯಾಸದ ಮಟ್ಟ ಎಷ್ಟು ಹೆಚ್ಚಿಸಬೇಕೆಂದು ಆಶೆ ಇದೆಯೋ ಅಷ್ಟೂ ಹೆಚ್ಚಿಸಿ ಉತ್ತಮ ಸ್ಥಿತಿಗೆ ತಂದ ಪಕ್ಷದಲ್ಲಿ ಈ ಪರೀಕ್ಷೆ ಹೋಗಬಹುದು; ಅಲ್ಲಿಯವರೆಗೂ ಇಟ್ಟು ಕೊಳ್ಳಬೇಕಾಗುತ್ತದೆ.

ಒಟ್ಟಿನಲ್ಲಿ ವಿದ್ಯಾಭ್ಯಾಸ ಕ್ರಮ, ರೀತಿ ನೀತಿಗಳು, ಏನು ಪಾಠ ಹೇಳಿಕೊಡಬೇಕು ಇತ್ಯಾದಿ ಎಲ್ಲಾ ವಿಷಯಗಳನ್ನು ಸರ್ಕಾರದವರು ಆಮೂಲಾಗ್ರವಾಗಿ ಯೋಚನೆ ಮಾಡುತ್ತಾ ಇದ್ದಾರೆ. ಇರತಕ್ಕ ಪದ್ಧತಿಯನ್ನು ಸರಿಪಡಿಸಿಕೊಂಡು ಹೋಗೋಣ. ಇದೆಲ್ಲವನ್ನೂ ಆ ಮೂಲಾಗ್ರವಾಗಿ ಪರಿಶೀಲನೆಮಾಡಿ ಇತ್ಯರ್ಥಪಡಿಸಲು ಪ್ರಯತ್ನಿಸುತ್ತೇವೆ. ಆದುದರಿಂದ ಶ್ರೀಮಾನ್ ಕರಿಯಪ್ಪನವರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—What does the mover propose to do with his resolution?

ಶ್ರೀ ಎಸ್. ಕರಿಯಪ್ಪನವರು.—ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಭೆಯ ಅನುಮತಿಯನ್ನು ಬೇಡುತ್ತೇನೆ.

Mr. SPEAKER.—Is it the pleasure of the House that the motion be withdrawn?

(There was one dissentient voice).

Mr. SPEAKER.—According to rule 141 even if one member of the House were to oppose leave being granted to withdraw, the Chair is bound to put the resolution to the vote of the House. I now therefore put the resolution to the vote.

The question is:

"That this Assembly is of the opinion that the Middle School Examination be abolished."

The motion was negatived.

No. 3. Sanction of a lakh of rupees for hostels to Scheduled Caste Students at Mysore and Bangalore.

*ಶ್ರೀ ಎಂ. ಮಾದಯ್ಯನವರು (ನಂಜನಗೂಡು ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಸಂಕಲ್ಪ ಈ ರೀತಿ ಇದೆ:

"That this Assembly is of the opinion that one lakh of rupees be sanctioned by the Government for constructing two hostel buildings, one at Mysore and an other at Bangalore, for scheduled caste students studying in High Schools and Colleges in the two cities of Mysore and Bangalore."

ಸ್ವಾಮಿ, ಗ್ರಾಮಾಂತರಗಳಿಂದ ಬಂದು ಪಟ್ಟಣಗಳಲ್ಲಿ ವ್ಯಾಸಂಗ ಮಾಡತಕ್ಕ ನಿಮ್ಮ ತರಗತಿಗೆ ಸೇರಿದ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯಗಳು ಸಾಕಷ್ಟಿಲ್ಲದೆ ಅನೇಕರು ತುಂಬಾ ತೊಂದರೆ ಪಡುತ್ತಿದ್ದಾರೆ. ಕಾಲೇಜಿನಲ್ಲಿ ವ್ಯಾಸಂಗ ಮಾಡತಕ್ಕವರಿಗೂ ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡತಕ್ಕವರಿಗೂ ಇದರ ಕಷ್ಟ ಬಹಳವಾಗಿದೆ. ಸರ್ಕಾರದವರೇನೋ ಕೆಲವು ಮುಂದಿಗೆ ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟಿರಬಹುದು. ಅವುಗಳನ್ನು ಪಡೆದೂ, ಇಂಥಾ ಹಾಸ್ಟಲ್ ಸೌಕರ್ಯಗಳಿಲ್ಲದಿದ್ದರೆ ಅವರು ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಬಹಳ ತೊಂದರೆಪಡಬೇಕಾಗುತ್ತದೆ.

ಸ್ವಾಮಿ, ಈಗ ತಾವು ವಿದ್ಯಾಭ್ಯಾಸಕ್ರಮದಲ್ಲಿ ಕೆಲವು ಮಾರ್ಪಾಡುಗಳಾಗಬೇಕೆಂದು ಹೇಳಿ ಈಗಾಗಲೇ ತೀವ್ರವಾಗಿ ಆಲೋಚನೆ ಮಾಡುತ್ತಿರುವುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಆ ಕಾಲ ಬಂದಾಗ ನಾನೂ ಕೆಲವು ಬದಲಾವಣೆಗಳನ್ನು ಸೂಚಿಸಬಯಸುತ್ತೇನೆ.